ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಪ್ರಮೋದ್ ಮುತ್ತಪ್ಪ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 17–12–2024 ರ ಮಂಗಳವಾರದಂದು ಪೂರ್ವಾಹ್ನ 11.00 ಗಂಟೆಗೆ ನಡೆದ ಪ್ರಾಧಿಕಾರದ 63 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ.
4. ಶ್ರೀಮತಿ ಸಂಗೀತ ಕೆ.ಆರ್, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
5. ಶ್ರೀ ಕಿರಣ್‌ಕುಮಾರ್ ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
6. ಶ್ರೀ ಆನಂದ್ ಕುಮಾರ್, ಸ್ಥಳೀಯ ಸಂಸ್ಥೆಯಿಂದ ನಾಮನಿರ್ದೇಶಿತವಾದ ಸದಸ್ಯರು.
7. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಡ್ಡೆಹೊಸೂರು ಗ್ರಾಮಪಂಚಾಯಿತಿ
8. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ

ಗೈರುಹಾಜರಾದವರು :–

1. ಶ್ರೀ ವಿ.ಎಸ್. ಸಜಿ, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ

ವಿಷಯ ಸಂಖ್ಯೆ(01): ದಿನಾಂಕ:12–09–2024 ರಂದು ನಡೆದ ಪ್ರಾಧಿಕಾರದ 62ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

(i): ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯ ತಾವರೆಕೆರೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ.

ಟಿಪ್ಪಣಿ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಪ್ರಾಧಿಕಾರದ ಸಭೆಯಲ್ಲಿ ವಿಷಯಸಂಖ್ಯೆ 1(i) ರಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ದಿನಾಂಕ:18–09–2024 ರಂದು ವಿಶೇಷ ಸಭೆ ನಿಗಧಿಪಡಿಸಿ, ವಿಶೇಷ ಸಭೆಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ ಮತ್ತು ಅಂತರ್ಜಲ ಅಭಿವೃದ್ಧಿ, ಉಪವಿಭಾಗ, ಮಡಿಕೇರಿ ಇವರನ್ನು ಆಹ್ವಾನಿಸಿ ತಾವರೆಕೆರೆಯ ಡಿ.ಪಿ.ಆರ್ ಬಗ್ಗೆ ಚರ್ಚಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿತ್ತು.

ಅದರಂತೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ ಮತ್ತು ಅಂತರ್ಜಲ ಅಭಿವೃದ್ಧಿ, ಉಪವಿಭಾಗ, ಮಡಿಕೇರಿ ಇವರನ್ನು ಆಹ್ವಾನಿಸಿ ದಿನಾಂಕ:18–09–2024 ರಂದು ವಿಶೇಷ ಸಭೆ ನಡೆಸಲಾಯಿತು. ವಿಶೇಷ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ಆದಷ್ಟು ಬೇಗ ತಾವರೆಕೆರೆಯ ಡಿ.ಪಿ.ಆರ್ ಮತ್ತು ಅಂದಾಜುಪಟ್ಟಿಗಳನ್ನು ತಯಾರಿಸಿ ನೀಡುವಂತೆ ಹಾಗೂ Beautification, ornamental trees, ornamental lights, pergola, walking path, pitching, desilting, Cast iron fencing ಹಾಗೂ benches ಗಳನ್ನು ಒಳಗೊಂಡಂತೆ ಡಿ.ಪಿ.ಆರ್ ತಯಾರಿಸಬೇಕೆಂದು ತಿಳಿಸಲಾಯಿತು. ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಒಂದು ವಾರದೊಳಗೆ ತಯಾರಿಸಿ ನೀಡುವುದಾಗಿ ತಿಳಿಸಿದರು. ಪ್ರಸ್ತುತ ಪ್ರಾಧಿಕಾರದಲ್ಲಿ ಲಭ್ಯವಿರುವ

2,94,00,000=00 ರೂಪಾಯಿಗಳನ್ನು ತಾವರೆಕೆರೆ ಅಭಿವೃದ್ಧಿಗೆ ಬಳಸಬೇಕೆಂದು ಹಾಗೂ ತಾವರೆಕೆರೆಯ ಡಿ.ಪಿ.ಆರ್ ಮತ್ತು ಅಂದಾಜುಪಟ್ಟಿ ಸಿದ್ಧಪಡಿಸಿದ ನಂತರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ. ಸಭೆಯ ನಡಾವಳಿಯನ್ನು ದಿನಾಂಕ:04–10–2024 ರಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಮಡಿಕೇರಿ ಇವರಿಗೆ ಸಲ್ಲಿಸಲಾಗಿದೆ.

ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು ಇವರು ತಾವರೆಕೆರೆಯ ಡಿ.ಪಿ.ಆರ್ ಅನ್ನು ಈ ಕಛೇರಿಗೆ ಸಲ್ಲಿಸಿ, ಕಾಮಗಾರಿಗೆ ಅವಶ್ಯವಿರುವ ಅನುದಾನ ರೂ.2,94,00,000=00 ಗಳನ್ನು ಠೇವಣಿ ಖಾತೆಗೆ ಠೇವಣಿ ಮಾಡಿದ್ದಲ್ಲಿ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಪಡೆದು ಕಾಮಗಾರಿಯನ್ನು ನಿರ್ವಹಿಸಿ ನಿಯಮಾನುಸಾರ ಮರು ಹಸ್ತಾಂತರಿಸಲಾಗುವುದು ಎಂದು ದಿ:05–11–2024 ರ ಪತ್ರದಲ್ಲಿ ತಿಳಿಸಿರುತ್ತಾರೆ.

ಸರ್ಕಾರದ ಸುತ್ತೋಲೆ ಪತ್ರ ಸಂ:ನಅಇ 36 ಗುಅಪ್ರಾ 2015 ಬೆಂಗಳೂರು ದಿನಾಂಕ: 04–08–2015 ರನ್ವಯ ಕ್ರಮವಹಿಸಬೇಕಾಗಿರುವುದರಿಂದ ಡಿ.ಪಿ.ಆರ್ ವರದಿಯೊಂದಿಗೆ ಪೂರಕ ದಾಖಲಾತಿಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರಿಗೆ ಸಹಮತ/ಮೇಲುರುಜುವನ್ನು ಪಡೆಯಲು ದಿನಾಂಕ:28–11–2024 ರಂದು ಸಲ್ಲಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರಿಂದ ಸಹಮತ/ಮೇಲುರುಜುವನ್ನು ಪಡೆದ ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರಿಂದ ಸಹಮತ/ಮೇಲುರುಜುವನ್ನು ಪಡೆದ ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ii): ಸಂಚಾರಿ ಪೋಲೀಸ್ ಠಾಣೆ ನಿರ್ಮಾಣಕ್ಕಾಗಿ 3ನೇ ಬ್ಲಾಕ್ ಚಿಕ್ಕಣ್ಣ ಬಡಾವಣೆಯ ನಾಗರೀಕ ಸೌಲಭ್ಯ ನಿವೇಶನವನ್ನು ಪೋಲೀಸ್ ಇಲಾಖೆಗೆ ಹಂಚಿಕೆ ಮಾಡುವ ಬಗ್ಗೆ.

ಟಿಪ್ಪಣಿ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಪ್ರಾಧಿಕಾರದ ಸಭೆಯಲ್ಲಿ ವಿಷಯಸಂಖ್ಯೆ 1(ii) ಅಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಜ್ಞಾಪನ ಪತ್ರದ ಮೇರೆಗೆ ಹಾಗೂ The Karnataka Planning Authorities (Allotment of Civic Amenity sites) Rules 2016, ನಿಯಮಗಳ ಪ್ರಕಾರ ಚಿಕ್ಕಣ್ಣ ಬಡಾವಣೆಯ ಸಿ.ಎ. ನಿವೇಶನವನ್ನು ಪೋಲೀಸ್ ಇಲಾಖೆಗೆ ಹಂಚಿಕೆ ಮಾಡಲು ಮುಂದಿನ ಕ್ರಮವಹಿಸಬೇಕೆಂದು ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿತ್ತು.

ಅದರಂತೆ, ಮಾನ್ಯ ಪೋಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ದಿನಾಂಕ:30–09–2024 ರಂದು ಪತ್ರ ಬರೆದು, ಸದರಿ ಸಿ.ಎ. ನಿವೇಶನಕ್ಕೆ ಉಪನೊಂದಣಾಧಿಕಾರಿಗಳು ನಿಗಧಿಪಡಿಸಿರುವ ಮೊತ್ತದ ಶೇಕಡಾ ಐವತ್ತರಷ್ಟು ಅಂದರೆ ರೂ. 66,23,970=00 ಗಳ ಗುತ್ತಿಗೆ ಮೊಬಲಗನ್ನು ಒಂದೇ ಮೊತ್ತದಲ್ಲಾಗಲೀ ಅಥವಾ ಐದು ವಾರ್ಷಿಕ ಕಂತುಗಳಲ್ಲಿ ಪಾವತಿಸಬಹುದೆಂದು ತಿಳಿಸಿ, ಪತ್ರದೊಂದಿಗೆ ಲಗತ್ತಿಸಿರುವ Form-I ಅನ್ನು ಭರ್ತಿ ಮಾಡಿ ಅದರೊಂದಿಗೆ ಪ್ರಾಧಿಕಾರವು ನಿಗಧಿಪಡಿಸಿರುವ ಗುತ್ತಿಗೆ ಮೊಬಲಗನ್ನು ಈ ಪತ್ರ ತಲುಪಿದ

ತೊಂಭತ್ತು ದಿನಗಳ ಒಳಗಾಗಿ ಈ ಕಛೇರಿಗೆ ಪಾವತಿಸುವಂತೆ ಹಾಗೂ ಶುಲ್ಕ ಪಾವತಿ ನಂತರ ನಿವೇಶನದ ಕರಾರು ಪತ್ರ ಮಾಡಿಕೊಳ್ಳುವ ಬಗ್ಗೆ ಕ್ರಮವಹಿಸಬಹುದಾಗಿದೆ ಎಂದು ತಿಳಿಸಲಾಗಿತ್ತು.

ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ದಿನಾಂಕ:10–10–2024ರ ಪತ್ರದಲ್ಲಿ ಈ ಹಿಂದೆ ಗುಂಡುರಾವ್ ಬಡಾವಣೆಯ ಸಿ.ಎ. ನಿವೇಶನವನ್ನು ಪುರಸಭೆ ವತಿಯಿಂದ ಪೋಲೀಸ್ ಇಲಾಖೆಗೆ ಹಂಚಿಕೆ ಮಾಡಿದ್ದು, ಸದರಿ ಜಾಗಕ್ಕೆ ರೂ. 22,71,597=00 ಗಳನ್ನು ಪೋಲೀಸ್ ಇಲಾಖೆಯವರು ಪುರಸಭೆಗೆ ಪಾವತಿಸಿದ್ದು, ಪ್ರಸ್ತುತ ಯೋಜನಾ ಪ್ರಾಧಿಕಾರವು ಬದಲಿ ನಿವೇಶನ ನೀಡುವುದಾಗಿ ತಿಳಿಸಿರುವುದರಿಂದ, ಪುರಸಭೆಗೆ ಪಾವತಿಸಿದ್ದ ಮೊತ್ತವನ್ನು ಯೋಜನಾ ಪ್ರಾಧಿಕಾರದ ಖಾತೆಗೆ ವರ್ಗಾಯಿಸಬೇಕೆಂದು ಪೋಲೀಸ್ ಇಲಾಖೆಯುವರು ಕೋರಿರುವುದರಿಂದ, ಯೋಜನಾ ಪ್ರಾಧಿಕಾರದ ಅಧಿಕೃತ ಖಾತೆ ಸಂಖ್ಯೆಯ ವಿವರವನ್ನು ನೀಡಬೇಕೆಂದು ಕೋರಿರುತ್ತಾರೆ ಮತ್ತು ದಿನಾಂಕ:30–10–2024 ರ ಪತ್ರದಲ್ಲಿ ಸದರಿ ರೂ. 22,71,597=00 ಗಳಿಗೆ ಇಲ್ಲಿಯವರೆಗೆ ಬಡ್ಡಿ ರೂ. 1,93,739=00 ಗಳು ಜಮೆಯಾಗಿದ್ದು, ಅಲ್ಲಿಂದ ತಹಲ್‌ವರೆಗೆ ಒಟ್ಟು ರೂ. 24,65,336=00 ಗಳು ಲಭ್ಯವಿರುತ್ತದೆ, ಈ ಮೊತ್ತವನ್ನು ಯೋಜನಾ ಪ್ರಾಧಿಕಾರಕ್ಕೆ ಪಾವತಿಸಬೇಕಾಗಿರುವುದರಿಂದ ಅಧಿಕೃತ ಖಾತೆ ಸಂಖ್ಯೆಯ ವಿವರವನ್ನು ಒದಗಿಸಬೇಕೆಂದು ಹಾಗೂ ಹಣ ವರ್ಗಾವಣೆ ಆದ ನಂತರ ಚಿಕ್ಕಣ್ಣ ಬಡಾವಣೆಯ 26.72 ಸೆಂಟ್ಸ್ ಜಾಗವನ್ನು ಬದಲಿ ನಿವೇಶನವನ್ನಾಗಿ ಪೋಲೀಸ್ ಇಲಾಖೆಗೆ ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ

ಮುಖ್ಯಾಧಿಕಾರಿಗಳು ತಿಳಿಸಿರುವ ಮೊತ್ತ ರೂ. 24,65,336/– ಗಳಿಗೆ 20.31 ಸೆಂಟ್ಸ್ (821.78 ಚ.ಮೀ) ಜಾಗವನ್ನು ಮಾತ್ರ ಗುತ್ತಿಗೆಗಾಗಿ ನೀಡಲು ಸಾಧ್ಯವಿರುತ್ತದೆ (ಉಪನೊಂದಾಣಾಧಿಕಾರಿಗಳು ನಿಗಧಿಪಡಿಸಿರುವ ಮೊತ್ತಕ್ಕೆ ಶೇ. 50% ರಷ್ಟು ವಿನಾಯಿತಿ ನೀಡಿದ ನಂತರ). ಆದ್ದರಿಂದ ಚಿಕ್ಕಣ್ಣ ಬಡಾವಣೆಯ ಸಿ.ಎ. ನಿವೇಶನವನ್ನು ಎರಡು ನಿವೇಶನಗಳನ್ನಾಗಿ ವಿಭಜಿಸಿ ದಿನಾಂಕ:08–11–2024 ರಂದು ನಕ್ಷೆ ಅನುಮೋದಿಸಲಾಗಿದೆ.

ವಿಭಜಿಸಿದ ವಿಸ್ತೀರ್ಣಗಳಿಗೆ ಅನುಗುಣವಾಗಿ ಎರಡು ಹೊಸ ಖಾತೆಗಳನ್ನು ಪ್ರಾಧಿಕಾರದ ಹೆಸರಿಗೆ ನೊಂದಾಯಿಸಿ ನಮೂನೆ–3 ಅನ್ನು ಮುಖ್ಯಾಧಿಕಾರಿಗಳು ನೀಡಿರುತ್ತಾರೆ ಮತ್ತು ದಿನಾಂಕ:15–11–2024 ರಂದು ರೂ. 24,65,336=00 ಗಳನ್ನು ಆರ್.ಟಿ.ಜಿ.ಎಸ್ ಮುಖಾಂತರ ಪ್ರಾಧಿಕಾರದ ಅಧಿಕೃತ ಸಿ.ಎ. ನಿವೇಶನದ ಖಾತೆಗೆ ಗುತ್ತಿಗೆ ಮೊಬಲಾಗಿ ಜಮಾ ಮಾಡಿರುತ್ತಾರೆ.

ದಿನಾಂಕ:28–11–2024 ರಂದು ಪೋಲೀಸ್ ಇಲಾಖೆಗೆ ಈ ಕಚೇರಿಯಿಂದ ಪತ್ರ ಬರೆದು ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು. 2016 ನಿಯಮ 14(ಸಿ)(2) ರನ್ವಯ 45 ದಿನಗಳ ಒಳಗಾಗಿ ಗುತ್ತಿಗೆ ಒಪ್ಪಂದ ಪತ್ರವನ್ನು ನೋಂದಾಯಿಸು ಕ್ರಮವಹಿಸಬೇಕೆಂದು ತಿಳಿಸಿ, ಗುತ್ತಿಗೆ ಒಪ್ಪಂದ ಪತ್ರದ ಕರಡು ಪ್ರತಿ **(**Form -3) ಅನ್ನು ಸಿದ್ಧಪಡಿಸಿ ಮಾನ್ಯ ಪೋಲೀಸ್ ಅಧೀಕ್ಷರು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ನೀಡಲಾಗಿದೆ.

ಪೋಲೀಸ್ ಇಲಾಖೆಯವರು ದಿನಾಂಕ:30–11–2024 ರಂದು ಗುತ್ತಿಗೆ ಒಪ್ಪಂದ ಪತ್ರಕ್ಕೆ ಸಹಿ ಪಡೆದಿರುತ್ತಾರೆ. ಪ್ರಾಧಿಕಾರದಿಂದ ಒಪ್ಪಂದ ಪತ್ರವನ್ನು ನೊಂದಾಯಿಸಿ ನೀಡುವಂತೆ ಉಪನೊಂದಣಾಧಿಕಾರಿಗಳಿಗೆ ದಿನಾಂಕ:30–11–2024 ರಂದು ಪತ್ರ ಬರೆಯಲಾಗಿದೆ. ಪೋಲೀಸ್ ಇಲಾಖೆಯವರು ನೊಂದಾಯಿಸಿದ ಒಪ್ಪಂದ ಪತ್ರದ ಪ್ರತಿಯನ್ನು ಪ್ರಾಧಿಕಾರಕ್ಕೆ ತಲುಪಿಸಿರುವುದಿಲ್ಲ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು. 2016 ನಿಯಮ 14(ಸಿ)(3) ರನ್ವಯ ಗುತ್ತಿಗೆ ಒಪ್ಪಂದಪತ್ರ ನೋಂದಾಯಿಸಿದ 30 ದಿನಗಳಿಗಿಂತ ತಡವಾಗದಂತೆ ಸ್ವಾಧೀನಪತ್ರ ನೀಡಬೇಕಾಗಿದೆ. ಸ್ವಾಧೀನಪತ್ರ ನೀಡುವ ಮೊದಲು ಸಿ.ಎ. ನಿವೇಶನದ ಟೋಟಲ್ ಸ್ಟೇಷನ್ ಅಳತೆ ಮಾಡಿ ಗಡಿಕಲ್ಲುಗಳನ್ನು ಗುರುತಿಸಬೇಕಾಗಿದೆ. ಆದ್ದರಿಂದ ಸದರಿ 821.78 ಚ.ಮೀ ಸಿ.ಎ. ನಿವೇಶನದ ಟೋಟಲ್ ಸ್ಟೇಷನ್

ಅಳತೆ ಮಾಡಿ ಗಡಿಕಲ್ಲುಗಳನ್ನು ಗುರುತಿಸಲು ದರಪಟ್ಟಿಯನ್ನು ನೀಡುವಂತೆ ದಿನಾಂಕ:02–12–2024 ರಂದು ಪ್ರಕಟಣೆಯನ್ನು ನೀಡಿದ್ದು, ದಿನಾಂಕ:03–12–2024 ರಿಂದ 17–12–2024ರ ಒಳಗಾಗಿ ದರಪಟ್ಟಿಯನ್ನು ಸಲ್ಲಿಸುವಂತೆ ಪ್ರಕಟಣೆ ನೀಡಲಾಗಿದೆ.

ಗಡಿಕಲ್ಲು ಗುರುತಿಸುವ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಬೇಕಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: ಯುಡಿಡಿ 286 ಮೈಅಪ್ರಾ 2016 ದಿನಾಂಕ:03–06–2019ರ ಪ್ರಕಾರ Fund I ರಲ್ಲಿರುವ ಮೊಬಲಗನ್ನು ಕಛೇರಿಯ ನಿವೇಶನ ಖರೀದಿಸುವಿಕೆ, ಕಟ್ಟಡ ನಿರ್ಮಾಣ ಹಾಗೂ ನಿರ್ವಹಣೆಗೆ ಮಾತ್ರ ಉಪಯೋಗಿಸಲು ಅವಕಾಶವಿರುತ್ತದೆ. ಆದರೆ Fund V ರಲ್ಲಿನ ಮೊಬಲಗನ್ನು ಯಾವುದೇ ಅಭಿವೃದ್ಧಿಕಾರ್ಯ, ಸಿ.ಎ ನಿವೇಶನವನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ಕೆ ಉಪಯೋಗಿಸಿಕೊಳ್ಳುವ ಅವಕಾಶವಿರುತ್ತದೆ. ಆದ್ದರಿಂದ Fund I ರಲ್ಲಿರುವ ಮೊಬಲಗನ್ನು ಸಿ.ಎ. ನಿವೇಶನದ ಗಡಿಕಲ್ಲು ಗುರುತಿಸಲು ಉಪಯೋಗಿಸಿಕೊಳ್ಳಬಹುದಾಗಿದೆ. ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಸಿ.ಎ. ನಿವೇಶನದ ಟೋಟಲ್ ಸ್ಟೇಷನ್ ಅಳತೆ ಮಾಡಿ, ಗಡಿಕಲ್ಲು ಗುರುತಿಸಲು ದರಪಟ್ಟಿಯಲ್ಲಿ ಕಡಿಮೆ ದರ ನಮೂದಿಸಿರು ಸಂಸ್ಥೆಯಿಂದ ಗಡಿಕಲ್ಲು ಗುರುತಿಸಲು ತೀರ್ಮಾನಿಸಲಾಯಿತು ಹಾಗೂ ಗಡಿಕಲ್ಲು ಗುರುತಿಸುವ ವೆಚ್ಚವನ್ನು ಪ್ರಾಧಿಕಾರದ Fund I ರಲ್ಲಿರುವ ಮೊಬಲಗಿನಿಂದ ಭರಿಸಬೇಕೆಂದು, ಗಡಿಕಲ್ಲು ಗುರುತಿಸಿ ನಂತರ ಪೋಲೀಸ್ ಇಲಾಖೆಗೆ ಸ್ವಾಧೀನಪತ್ರ ನೀಡಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(iii): ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ

ಕ್ರ. ಸಂ.	ಇಲಾಖೆಗಳಿಂದ ಬಂದ ಕೋರಿಕೆ	ಹಿಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯ	ಷರಾ
1.	ಕಾರ್ಯಪಾಲಕ ಇಂಜಿಯನಿಯರ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರು ಕೂಡ್ಲೂರು ಗ್ರಾಮದ ಸರ್ವೆ ನಂ. 58/9 ರ 466.75 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನ ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ	ವಿಷಯವನ್ನು ಹಿಂದಿನ ಸಭೆಯಲ್ಲಿ ಚರ್ಚಿಸಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರಿಗೆ ಕೂಡ್ಲೂರು ಗ್ರಾಮದ ಸರ್ವೆ ನಂ. 58/9 ರ 466.75 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು–2016ರ ಪ್ರಕಾರ 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಬಹುದೆಂದು ಹಿಂದಿನ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.	ಸದರಿ ಸಿ.ಎ. ನಿವೇಶನದ ಖಾತೆ (ನಮೂನೆ–9&11) ಅನ್ನು ಕೂಡಲೇ ಮಾಡಿಕೊಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರನ್ನು ದಿನಾಂಕ: 31–08–2024 ಕೋರಲಾಗಿದೆ. ಆದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರು ಖಾತೆಯನ್ನು ಇದುವರೆಗೂ ನೀಡಿರುವುದಿಲ್ಲ.
2	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸೋಮವಾರಪೇಟೆ ತಾಲ್ಲೂಕು ಇವರು ಶ್ರೀ ದೇವರಾಜು ಅರಸು ಭವನ ನಿರ್ಮಾಣ ಮಾಡಲು ನಾಗರೀಕ	40 ಸೆಂಟ್ಸ್ ಅಳತೆಯ ಸಿ.ಎ. ನಿವೇಶನ ಪ್ರಾಧಿಕಾರದಲ್ಲಿ ಲಭ್ಯವಿಲ್ಲದ ಕಾರಣ, ಸದರಿಯವರಿಗೆ ಕೂಡ್ಲೂರು ಗ್ರಾಮದ ಸ.ನಂ. 60/2 ರ 1401.46 ಚ.ಮೀ (34.6 ಸೆಂಟ್ಸ್) ಸಿ.ಎ ನಿವೇಶನವನ್ನು	ಸಭೆಯ ನಿರ್ಣಯದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸೋಮವಾರಪೇಟೆ ತಾಲ್ಲೂಕು ಇವರಿಗೆ

	ಸೌಲಭ್ಯದ ನಿವೇಶನ ಅಥವಾ 40 ಸೆಂಟ್ ಜಾಗವನ್ನು ಹಿಂದುಳಿದ ವರ್ಗಗಳ ಇಲಾಖೆಗೆ ಕಾಯ್ದಿರಿಸಿ ಕೊಡಬೇಕೆಂದು ಕೋರಿರುತ್ತಾರೆ.	ಹಂಚಿಕೆ ಮಾಡಬಹುದಾಗಿರುತ್ತದೆ.	ದಿನಾಂಕ:16–10–2024 ರಂದು ಪತ್ರ ಬರೆಯಲಾಗಿದೆ.
3	ಹಿರಿಯ ಉಪನೋಂದಣಾಧಿಕಾರಿ, ಕುಶಾಲನಗರ ಇವರು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವ 2400 ಚದರ ಅಡಿ ಅಳತೆಯ ಸಿ.ಎ. ನಿವೇಶನವನ್ನು ಉಪನೋಂದಣಿ ಕಛೇರಿಗೆ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.	2400 ಚದರ ಅಡಿ ಅಳತೆಯ ಸಿ.ಎ. ನಿವೇಶನ ಪ್ರಾಧಿಕಾರದಲ್ಲಿ ಲಭ್ಯವಿಲ್ಲದ ಕಾರಣ, ಸದರಿಯವರಿಗೆ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/4 ರ 348.37 ಚ.ಮೀ ಸಿ.ಎ ನಿವೇಶನ ಅಥವಾ ಬೈಚನಹಳ್ಳಿ ಗ್ರಾಮದ ಸ.ನಂ. 89/5 ರ 226.61 ಚ.ಮೀ ಸಿ.ಎ ನಿವೇಶನವನ್ನು ಹಂಚಿಕೆ ಮಾಡಬಹುದಾಗಿರುತ್ತದೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.	ಸಭೆಯ ನಿರ್ಣಯದಂತೆ ಹಿರಿಯ ಉಪನೋಂದಣಾಧಿಕಾರಿ, ಕುಶಾಲನಗರ ಇವರಿಗೆ ದಿನಾಂಕ: 17–09–2024 ರಂದು ಪತ್ರ ಬರೆಯಲಾಗಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರು ಕೂಡ್ಲೂರು ಗ್ರಾಮದ ಸ.ನಂ. 59/9 ರಲ್ಲಿ 144.00 ಚ.ಮೀ ವಿಸ್ತೀರ್ಣದ ಸಿ.ಎ ನಿವೇಶನ ಮತ್ತು ಸ.ನಂ. 66/9 ರಲ್ಲಿ 405.16 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನಗಳ ಖಾತೆಯನ್ನು ನೀಡಿದ್ದು, ದಾಖಲೆಗಳಲ್ಲಿ ಮಾಲೀಕರ ವಿಳಾಸ ಮತ್ತು ಗುರುತಿನ ದಾಖಲೆಗಳ ಕಾಲಂಗಳಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದ ವಿಳಾಸವನ್ನು ಮತ್ತು ಸದಸ್ಯಕಾರ್ಯದರ್ಶಿಯವರ ಆಧಾರ್ ನಂಬರ್ ತಪ್ಪಾಗಿ ನಮೂದಾಗಿದ್ದು, ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರನ್ನು ವಿಚಾರಿಸಲಾಗಿ, ಸದರಿ ಮಾಹಿತಿಗಳನ್ನು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನಮೂದಿಸಲಾಗಿದ್ದು, ಉಪನೊಂದಣಾಧಿಕಾರಿಗಳು ಕಾವೇರಿ ತಂತ್ರಾಂಶದಲ್ಲಿಯೇ ತಿದ್ದುಪಡಿ ಮಾಡಬೇಕೆಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ತಿದ್ದುಪಡಿ ಮಾಡಿಕೊಡುವಂತೆ ಉಪನೊಂದಣಾಧಿಕಾರಿಗಳನ್ನು ದಿನಾಂಕ: 03–12–2024 ರಂದು ಕೋರಲಾಗಿದ್ದು, ಉಪನೊಂದಣಾಧಿಕಾರಿಗಳು ಕೂಡುಮಂಗಳೂರು ಗ್ರಾಮಪಂಚಾಯಿಯಲ್ಲೇ ಸರಿಪಡಿಸಬೇಕೆಂದು ಪತ್ರವನ್ನು ಹಿಂದಿರುಗಿಸಿರುತ್ತಾರೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಸಿ.ಎ. ನಿವೇಶನದ ಖಾತೆಯಲ್ಲಿ ವಿವರಗಳನ್ನು ತಿದ್ದುಪಡಿಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದು, ಖಾತೆ ತಿದ್ದುಪಡಿಯಾದ ನಂತರ ಮುಂದಿನ ಕ್ರಮವಹಿಸಲು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ಸಭೆಯಲ್ಲಿ ನಿರ್ಣಯಿಸಲಾಯಿತು.

ವಿಷಯಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಸಪ್ಟೆಂಬರ್ 2024, ಅಕ್ಟೋಬರ್ 2024 ಮತ್ತು ನವೆಂಬರ್ 2024ರ ಮಾಹೆಗಳ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಸಪ್ಟೆಂಬರ್ 2024, ಅಕ್ಟೋಬರ್ 2024 ಮತ್ತು ನವೆಂಬರ್ 2024ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಸಪ್ಟೆಂಬರ್ –2024					
ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	ಪ್ರಾರಂಭಿಕ ಶಿಲ್ಕು	ರೂ. 66,42,076=50	1.	ಹೊರಗುತ್ತಿಗೆ ಸೇವೆ	ರೂ. 39,320=00
2.	ಆಗಸ್ಟ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 90,283=00
			3.	ವಿದ್ಯುತ್	ರೂ. 1,218=00
	1) ಪರಿಶೀಲನಾ ಶುಲ್ಕ	ರೂ. 1,23,530=00	4.	ದೂರವಾಣಿ	ರೂ. 1,769=00

	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 92,650=00	5.	ಪತ್ರಿಕಾ ಪ್ರಕಟಣೆ ಜಾಹಿರಾತು ವೆಚ್ಚ	ರೂ. 17261=00
	4)ವಿನ್ಯಾಸ ರಚನೆ ಶುಲ್ಕ	ರೂ. 7,190=00	6.	ಸಾದಿಲ್ವಾರ ವೆಚ್ಚ	ರೂ. 8124=00
	5) ಬ್ಯಾಂಕ್ ಬಡ್ಡಿ	ರೂ. 40,260=00	7.	ಸದಸ್ಯರ ಗೌರವಧನ	ರೂ. 4,000=00
	6) ಇ.ಎಂ.ಡಿ. ಮೊತ್ತ	ರೂ. 26,000=00	8.	ಅಂಚೆ ಚೀಟಿ ಖರೀದಿ	ರೂ. 2,000=00
				ವೆಚ್ಚ	ರೂ. 1,63,975=00
				ಅಖೈರು ಶಿಲ್ಕು	ರೂ. 67,67,731=50
	ಒಟ್ಟು ಮೊಬಲಗು	ರೂ.69,31,706=50		ಒಟ್ಟು ಮೊಬಲಗು	ರೂ. 69,31,706=50

ಅಕ್ಟೋಬರ್ –2024

ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	ಪ್ರಾರಂಭಿಕ ಶಿಲ್ಕು	ರೂ. 67,67,731=50	1	ಹೊರಗುತ್ತಿಗೆ ಸೇವೆ	ರೂ. 39,320=00
2.	ಆಗಸ್ಟ್ 2024 ರ ಮಾಹೆಯ ಜಮಾ		2	ಸದಸ್ಯಕಾರ್ಯದರ್ಶಿ ವೇತನ	ರೂ. 90,283=00
	1) ಪರಿಶೀಲನಾ ಶುಲ್ಕ	ರೂ. 97,250=00	3	ಅಧ್ಯಕ್ಷರ ಗೌರವ ಧನ (ಜುಲೈ 2024 ರಿಂದ ಸಪ್ಟೆಂಬರ್ ರವರೆಗೆ)	ರೂ. 9,000=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 1,68,990=00	4	ಸದಸ್ಯರ ಗೌರವಧನ	ರೂ. 1000=00
	3) ಕಟ್ಟಡದ ಶುಲ್ಕ	ರೂ. 54,050=00	5	ಪ್ರಯಾಣ ಭತ್ಯೆ (ಮಾರ್ಚ್ 2024 ರಿಂದ ಆಗಸ್ಟ್ 2024 ರವರೆಗೆ)	ರೂ. 19,440=00
	4)ವಿನ್ಯಾಸ ರಚನೆ ಶುಲ್ಕ	ರೂ. 2,960=00	6	ಸದಸ್ಯಕಾರ್ಯದರ್ಶಿಯವರ ವೇತನ ಹೆಚ್ಚಳ (ಜೂನ್ 2024 ರಿಂದ ಸಪ್ಟೆಂಬರ್ 2024 ರವರೆಗೆ)	ರೂ. 7,287=00
	5)ಇಂಜಿನಿಯರ್ ಶುಲ್ಕ	ರೂ. 1,000=00			
	6) ಇತರೆ ಶುಲ್ಕ	ರೂ. 800=00	7	ವಿದ್ಯುತ್	ರೂ. 1,205=00
			8.	ದೂರವಾಣಿ	ರೂ. 1,804=00
			9	ಹೊರಗುತ್ತಿಗೆ ನೌಕರರ 2021–22 ನೇ ಸಾಲಿನ ಆದಾಯ ತೆರಿಗೆ ಬಾಬ್ತು (ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿರುವಂತೆ)	ರೂ. 8,232=00
			10	ಹೊರಗುತ್ತಿಗೆ ನೌಕರರ 2020–21 ನೇ ಸಾಲಿನ ಆದಾಯ ತೆರಿಗೆ ಬಾಬ್ತು (ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿರುವಂತೆ)	ರೂ. 15,024=00
			11	ಹೊರಗುತ್ತಿಗೆ ನೌಕರರ 2019–20 ನೇ ಸಾಲಿನ ಆದಾಯ ತೆರಿಗೆ ಬಾಬ್ತು (ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿರುವಂತೆ)	ರೂ. 5,222=00
			12	ಖಾಸಗಿ ವಾಹನದ ಹೊರಗುತ್ತಿಗೆ ಸೇವೆ	ರೂ. 33,810=00
				ವೆಚ್ಚ	ರೂ. 2,31,627=00
				ಅಖೈರು ಶಿಲ್ಕು	ರೂ. 68,61,154=50
	ಒಟ್ಟು ಮೊಬಲಗು	ರೂ. 70,92,781=50		ಒಟ್ಟು ಮೊಬಲಗು	ರೂ. 70,92,781=50

ನವೆಂಬರ್ –2024

ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	ಪ್ರಾರಂಭಿಕ ಶಿಲ್ಕು	ರೂ. 68,61,154=50	1.	ಹೊರಗುತ್ತಿಗೆ ಸೇವೆ	ರೂ. 38,654=00
2.	ಆಗಸ್ಟ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 1,01,965=00
	1) ಪರಿಶೀಲನಾ ಶುಲ್ಕ	ರೂ. 14,090=00	3.	ಸದಸ್ಯಕಾರ್ಯದರ್ಶಿ ಹೆಚ್ಚುವರಿ ವೇತನ (ಆಗಸ್ಟ್ ಮತ್ತು ಸಪ್ಟೆಂಬರ್ ವ್ಯತ್ಯಾಸದ ಮೊಬಲಗು)	ರೂ. 18,506=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 14,970=00	4.	ವಿದ್ಯುತ್	ರೂ. 1,118=00
			5.	ದೂರವಾಣಿ	ರೂ. 1,769=00
			6.	ಯು.ಪಿ.ಎಸ್.ಗೆ ಹೊಸ ಬ್ಯಾಟರಿ	ರೂ. 10,000=00

	3) ಕಟ್ಟಡ ಶುಲ್ಕ	ರೂ. 7,190=00		ಆಳವಡಿಸಿದ ಮೊಬಲಗು	
	4) ಇತರೆ	ರೂ. 1320=00	7.	ಸದಸ್ಯರ ಗೌರವಧನ	ರೂ. 3,000=00
			8.	ಬ್ಯಾಂಕ್ ಚಾರ್ಜಸ್	ರೂ. 354=00
			9.	ಖಾಸಗಿ ವಾಹನದ ಹೊರಗುತ್ತಿಗೆ ಸೇವೆ	ರೂ. 33,810=00
				ವೆಚ್ಚ	ರೂ. 2,09,176=00
				ಅಖೈರು ಶಿಲ್ಕು	ರೂ. 66,89,548=50
	ಒಟ್ಟು ಮೊಬಲಗು	ರೂ. 68,98,724=50		ಒಟ್ಟು ಮೊಬಲಗು	ರೂ. 68,98,724=50

30–11–2024 ರ ಅಂತ್ಯಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕುಶಾಲನಗರ ಶಾಖೆಯಲ್ಲಿ ಇರುವ ಮೊಬಲಗಿನ ವಿವರ.

ಕ್ರ.ಸಂ.	ಬ್ಯಾಂಕ್ ಖಾತೆಯ ವಿವರ	ಮೊಬಲಗು
1.	ಉಳಿತಾಯ ಶುಲ್ಕದ ಖಾತೆ ಸಂಖ್ಯೆ: 64041739956 (ಪರಿಶೀಲನಾ ಶುಲ್ಕ, ಕೆ.ಟಿ.ಸಿ.ಪಿ.ಕಾಯ್ದೆ 18ರ ಅಡಿಯಲ್ಲಿ ಉತ್ತಮತೆ ಶುಲ್ಕ, ಕಟ್ಟಡ ಶುಲ್ಕ ಹಾಗೂ ಇತರೆ ಶುಲ್ಕ)	ರೂ. 66,89,548=50
2.	ಕೆರೆ ಅಭಿವೃದ್ಧಿ ಶುಲ್ಕದ ಖಾತೆ ಸಂಖ್ಯೆ: 64113591421	ರೂ. 9,20,205=00
3.	ಸೆಸ್ ಶುಲ್ಕದ ಖಾತೆ ಸಂಖ್ಯೆ: 40179698207 (ನೀರು ಸರಬರಾಜು ಸೆಸ್, ಸ್ಲಂ ಸೆಸ್, ವರ್ತುಲ ರಸ್ತೆ,)	ರೂ. 12,37,757=00
4.	ಸಿ.ಎ. ನಿವೇಶನದ ಖಾತೆ ಸಂಖ್ಯೆ: 43198527611	ರೂ. 24,65,336=00

ನಿರ್ಣಯ:– ಸಪ್ಟೆಂಬರ್ 2024, ಅಕ್ಟೋಬರ್ 2024 ಮತ್ತು ನವೆಂಬರ್ 2024ರ ಮಾಹೆಗಳ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ(03): 2024–25ನೇ ಸಾಲಿನಲ್ಲಿ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಪತ್ರಿಕಾ ಪ್ರಕಟಣೆ ನೀಡಿದ್ದು, ಎರಡು ಇಲಾಖೆಗಳಿಂದ ಕೋರಿಕೆ ಬಂದಿರುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದಲ್ಲಿ 2024–25ನೇ ಸಾಲಿನಲ್ಲಿ ಒಟ್ಟು ಹನ್ನೆರಡು ನಾಗರೀಕ ಸೌಲಭ್ಯ ನಿವೇಶನಗಳಿದ್ದು, ಸದರಿ ಸಿ.ಎ. ನಿವೇಶನಗಳಿಗೆ ಉಪನೋಂದಣಾಧಿಕಾರಿಗಳು ನಿಗದಿಪಡಿಸಿರುವ ಮಾರುಕಟ್ಟೆ ದರದಂತೆ ಗುತ್ತಿಗೆ ಮೊಬಲಗನ್ನು ನಿಗಧಿಪಡಿಸಿ, ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಸರ್ಕಾರದ ಸುತ್ತೋಲೆಯಂತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಪ್ರಚುರ ಪಡಿಸುವಂತೆ ಜಿಲ್ಲಾವಾರ್ತ ಮತ್ತು ಪ್ರಚಾರಾಧಿಕಾರಿಗಳಿಗೆ ಪತ್ರ ಬರೆದಿದ್ದು, ಸದರಿ ಪ್ರಕಟಣೆಯು ವಿಜಯಕರ್ನಾಟಕ ಕನ್ನಡ ದಿನಪತ್ರಿಕೆಯಲ್ಲಿ ಮತ್ತು Deccan Herald ಇಂಗ್ಲೀಷ್ ದಿನಪತಿಕೆಯಲ್ಲಿ ದಿನಾಂಕ:24–10–2024 ರಂದು ಪ್ರಕಟಣೆಗೊಂಡಿರುತ್ತದೆ.

ಕ್ರ. ಸಂ.	ಇಲಾಖೆಗಳಿಂದ ಬಂದ ಕೋರಿಕೆ	ಸದಸ್ಯಕಾರ್ಯದರ್ಶಿ ಅಭಿಪ್ರಾಯ
1	ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರು ಮೌಲಾನಾ ಆಜಾದ್ ಮಾದರಿ ಶಾಲೆಯನ್ನು ಸ್ವಂತ ಕಟ್ಟಡವನ್ನು ನಿರ್ಮಿಸಲು ಮುಳ್ಳುಸೋಗೆ ಗ್ರಾಮದ ಸರ್ವೆ	ಮುಳ್ಳುಸೋಗೆ ಗ್ರಾಮದ, ಸರ್ವೆ ನಂ. 43/1, 43/2 ರಲ್ಲಿನ 1113.05 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನದ ಖಾತೆಯನ್ನು ಸದಸ್ಯಕಾರ್ಯದರ್ಶಿ ಹೆಸರಿಗೆ ನೊಂದಾಯಿಸಿ

	ನಂಬರ್ 43/1, 43/2 ರಲ್ಲಿನ 1113.05 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಒದಗಿಸಿಕೊಡಬೇಕೆಂದು ಕೋರಿರುತ್ತಾರೆ.	ನಮೂನೆ–3 ಅನ್ನು ನೀಡಬೇಕೆಂದು ಮುಖ್ಯಾಧಿಕಾರಿ ಪುರಸಭೆ ಇವರಿಗೆ ದಿನಾಂಕ: 31–08–2024 ಮತ್ತು 04–10–2024 ರಂದು ಪತ್ರ ಬರೆಯಲಾಗಿದ್ದು, ಇದುವರೆಗೂ ನಮೂನೆ–3 ಅನ್ನು ನೀಡಿರುವುದಿಲ್ಲ. ಮುಖ್ಯಾಧಿಕಾರಿಗಳು ನಮೂನೆ–3ಅನ್ನು ನೀಡಿದ ನಂತರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಮೌಲಾನಾ ಆಜಾದ್ ಮಾದರಿ ಶಾಲೆಯ ಸ್ವಂತ ಕಟ್ಟಡವನ್ನು ನಿರ್ಮಿಸಲು ಸದರಿ 1113.05 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಲು ಉಪನೊಂದಣಾಧಿಕಾರಿಗಳು ನಿಗಧಿಪಡಿಸಿದ ಮಾರುಕಟ್ಟೆ ಮೌಲ್ಯದ ಶೇ.50% ರಷ್ಟು ಮೊಬಲಗನ್ನು ಗುತ್ತಿಗೆ ಹಣವಾಗಿ ಪಾವತಿಸುವಂತೆ ಪತ್ರ ಬರೆಯಬಹುದಾಗಿದೆ.
2	ಮುಖ್ಯಾಧಿಕಾರಿ, ಪುರಸಭೆ ಇವರು, ದಿನಾಂಕ:10–12–2024ರ ಪತ್ರದಲ್ಲಿ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ, ಸೋಮವಾರಪೇಟೆ ಇವರ ಕೋರಿಕೆಯಂತೆ ಅಂಗನವಾಡಿ ಕೇಂದ್ರ ನಡೆಸಲು ಬೈಚನಹಳ್ಳಿ ಗ್ರಾಮದ ಸರ್ವೆ ನಂಬರ್ 89/4, 89/5, 89/10, 89/11 ರಲ್ಲಿನ 226.61 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಶಿಶು ಅಭಿವೃದ್ಧಿ ಯೋಜನಾ ಇಲಾಖೆಗೆ ತುರ್ತಾಗಿ ಹಸ್ತಾಂತರ ಮಾಡಲು ಕ್ರಮವಹಿಸಬೇಕೆಂದು ಕೋರಿರುತ್ತಾರೆ.	ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ, ಸೋಮವಾರಪೇಟೆ ಇವರಿಗೆ ಅಂಗನವಾಡಿ ಕೇಂದ್ರ ನಡೆಸಲು ಬೈಚನಹಳ್ಳಿ ಗ್ರಾಮದ ಸರ್ವೆ ನಂಬರ್ 89/4, 89/5, 89/10 ರಲ್ಲಿನ 226.61 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವು ಪ್ರಾಧಿಕಾರದ ಹೆಸರಿಗೆ ಖಾತೆ ಆಗಿದ್ದು, ಸದರಿ ಇಲಾಖೆಗೆ ಹಂಚಿಕೆ ಮಾಡಬಹುದಾಗಿದ್ದು, ಉಪನೊಂದಣಾಧಿಕಾರಿಗಳು ನಿಗಧಿಪಡಿಸಿದ ಮಾರುಕಟ್ಟೆ ಮೌಲ್ಯದ ಶೇ.50% ರಷ್ಟು ಮೊಬಲಗನ್ನು ಗುತ್ತಿಗೆ ಹಣವಾಗಿ ಪಾವತಿಸುವಂತೆ ಪತ್ರ ಬರೆಯಬಹುದಾಗಿದೆ.

ಸಿ.ಎ. ನಿವೇಶನದ ಪ್ರಕಟಣೆಯನ್ನು ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ನೀಡಿದ್ದು, ವಿಜಯಕರ್ನಾಟಕ ಮತ್ತು Deccan Herald ದಿನಪತ್ರಿಕೆಯವರು ಜಾಹಿರಾತು ವೆಚ್ಚದ ರಸೀದಿಯನ್ನು ನೀಡಿದ್ದು, ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಕೊಡಗು ಜಿಲ್ಲೆ ಮಡಿಕೇರಿ ಇವರು ದರವನ್ನು ಪರಿಶೀಲಿಸಿ, ಜಾಹಿರಾತು ವೆಚ್ಚವನ್ನು ಪಾವತಿಸಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಜಾಹಿರಾತು ವೆಚ್ಚವನ್ನು ಪ್ರಾಧಿಕಾರದಿಂದ ಪಾವತಿಸಲು ಹಾಗೂ ಮೇಲ್ಕಂಡ ಇಲಾಖೆಗಳಿಗೆ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಲು ವಿಷಯವನ್ನು ಸಭೆಗೆ ಮಂಡಿಸಿದೆ.

ಚರ್ಚೆ:– ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರಾದ ಶ್ರೀ ಆನಂದ್‌ಕುಮಾರ್ ರವರು ಸಿ.ಎ. ನಿವೇಶನಗಳ ಹಂಚಿಕೆ ಬಗ್ಗೆ ಸದಸ್ಯಕಾರ್ಯದರ್ಶಿಯವರಿಂದ ಮಾಹಿತಿ ಪಡೆಯುತ್ತಾರೆ. ಮುಖ್ಯಾಧಿಕಾರಿಗಳು ಸಿ.ಎ. ನಿವೇಶನದಲ್ಲಿ ಸಮುಚ್ಛ ಕಟ್ಟಡಗಳು, ಸಮುದಾಯ ಭವನ, ಗ್ರಂಥಾಲಯ, ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡಬಹುದೆಂದು, ಇದರಿಂದ ಪ್ರಾಧಿಕಾರಕ್ಕೆ ಆದಾಯ ಬರುತ್ತದೆಂದು ತಿಳಿಸುತ್ತಾರೆ ಹಾಗೂ ರಸ್ತೆ ಅಭಿವೃದ್ಧಿ ಕಾರ್ಯ ಮಾಡಬಹುದೆಂದು ತಿಳಿಸಿ, ಮಾಗಡಿ ಯೋಜನಾ ಪ್ರಾಧಿಕಾರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಸದಸ್ಯಕಾರ್ಯದರ್ಶಿಗಳು

ಮುಖ್ಯಾಧಿಕಾರಿಗಳಿಗೆ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರಿಗೆ ಸಿ.ಎ. ನಿವೇಶನದ ಖಾತೆ ಮಾಡಿಕೊಡುವಂತೆ ತಿಳಿಸಿದರು.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಮುಖ್ಯಾಧಿಕಾರಿಗಳು ಸಿ.ಎ. ನಿವೇಶನದ ಖಾತೆ ಮಾಡಿಕೊಡುವುದಾಗಿ ತಿಳಿಸಿದ್ದು, ಖಾತೆ ನೊಂದಣಿಯಾದ ನಂತರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಮೌಲಾನಾ ಆಜಾದ್ ಮಾದರಿ ಶಾಲೆಯ ಸ್ವಂತ ಕಟ್ಟಡವನ್ನು ನಿರ್ಮಿಸಲು ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 43/1, 43/2 ರಲ್ಲಿನ 1113.05 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಬಹುದೆಂದು ಮತ್ತು ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ, ಸೋಮವಾರಪೇಟೆ ಇವರಿಗೆ ಅಂಗನವಾಡಿ ಕೇಂದ್ರ ನಡೆಸಲು ಬೈಚನಹಳ್ಳಿ ಗ್ರಾಮದ ಸರ್ವೆ ನಂಬರ್ 89/4, 89/5, 89/10 ರಲ್ಲಿನ 226.61 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(04): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 56/2, 62/2ಪಿ, 62/1 ರಲ್ಲಿ 4.02 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಯಲ್ಲಿ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು:– ಶ್ರೀ ಟಿ.ಟಿ. ಅಬ್ದುಲ್ ರಫೀಕ್)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿ ಶೇ.40% ಮತ್ತು ಶೇ.30% ರಷ್ಟು ನಿವೇಶನಗಳು ಈಗಾಗಲೇ ಬಿಡುಗಡೆಗೊಂಡಿದ್ದು, ಎಲ್ಲಾ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡಿರುವ ಬಗ್ಗೆ ದೃಢೀಕರಣಪತ್ರವನ್ನು ಸಲ್ಲಿಸಿರುವುದರಿಂದ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆ ಮಾಡಲು ಮುಂದಿನ ಕ್ರಮವಹಿಸಬೇಕೆಂದು ಕೋರಿರುತ್ತಾರೆ. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

1	ಪ್ರಶ್ನಿತ ಜಮೀನನ್ನು ಮಾನ್ಯ ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಮಡಿಕೇರಿ ಇವರ ಆದೇಶ ಸಂಖ್ಯೆ:ಪರಿ:17:92–93 ದಿನಾಂಕ: 09–10–1992 ರಂದು ವಾಸೋಪಯೋಗಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.
2	ದಿನಾಂಕ: 05–01–2016 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಸದರಿ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.
3	ದಿನಾಂಕ: 12–01–2016 ರಂದು ನಡೆದ ಪ್ರಾಧಿಕಾರದ 25ನೇ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಸರ್ಕಾರದ ನಿಯಮದಂತೆ ಕ್ರಮವಹಿಸಿ ಸದರಿ ಜಾಗಕ್ಕೆ ನಿಯಮಾವಳಿಯಂತೆ ಹಾಗೂ ಸರ್ಕಾರದ ಸುತ್ತೋಲೆಯಂತೆ ಮತ್ತು ಉದ್ಯಾನವನದ ಸುತ್ತ ಬೇಲಿಯನ್ನು ಮತ್ತು ನಾಮಫಲಕವನ್ನು ಅಳವಡಿಸುವ ನಿಬಂಧನೆಗೆ ಒಳಪಟ್ಟು ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ನಿರ್ಣಯಿಸಲಾಗಿದೆ.
4	ದಿನಾಂಕ: 26–02–2016 ರಂದು ಪ್ರಶ್ನಿತ ಜಮೀನಿನಲ್ಲಿ 40 ನಿವೇಶನಗಳನ್ನು ಕಾಯ್ದೆಯನ್ವಯ ಅಳವಡಿಸಿ, ರಸ್ತೆ, ಉದ್ಯಾನವನ, ಸಿ.ಎ ನಿವೇಶನಗಳನ್ನು ಒಳಗೊಂಡಂತೆ ನಕ್ಷೆ ತಯಾರಿಸಿ, ವಸತಿ ವಿನ್ಯಾಸ ನಕ್ಷೆಗೆ ಈ ಕಛೇರಿಯಿಂದ ಅನುಮೋದನೆ ನೀಡಲಾಗಿದೆ.
5	ಭೂಮಾಲೀಕರು ದಿನಾಂಕ: 11–03–2016 ರಂದು ಗಿಫ್ಟ್ ಡೀಡ್ ಮುಖಾಂತರ ಸದರಿ ವಿನ್ಯಾಸ ನಕ್ಷೆಯಲ್ಲಿನ ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ನಿವೇಶನವನ್ನು ಕೂಡುಮಂಗಳೂರು ಗ್ರಾಮಪಂಚಾಯಿತಿ ಹೆಸರಿಗೆ ಹಸ್ತಾಂತರ ಮಾಡಿರುತ್ತಾರೆ.
6	ದಿನಾಂಕ: 15–03–2016 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು

	ಗ್ರಾಮಪಂಚಾಯಿತಿ ಇವರು ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ನಿವೇಶನವನ್ನು ಕೂಡುಮಂಗಳೂರು ಗ್ರಾಮಪಂಚಾಯಿತಿ ಹೆಸರಿಗೆ ಹಸ್ತಾಂತರ ಮಾಡಿದ್ದು, ಸದರಿ ವಿನ್ಯಾಸ ನಕ್ಷೆಯಲ್ಲಿನ ಶೇ.40% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.
7	19–07–2016 ರಂದು ವಿನ್ಯಾಸ ನಕ್ಷೆಯಲ್ಲಿರುವ ಒಟ್ಟು 40 ನಿವೇಶನಗಳ ಪೈಕಿ ಶೇ.40% ರಂತೆ 16 ನಿವೇಶನಗಳನ್ನು ಮೊದಲನೇ ಹಂತದಲ್ಲಿ ಈ ಕಛೇರಿಯಿಂದ ಬಿಡುಗಡೆಗೊಳಿಸಲಾಗಿದೆ.
8	ದಿನಾಂಕ: 22–08–2016 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಶೇ.30% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.
9	25–08–2016 ರಂದು ಎರಡನೇ ಹಂತದಲ್ಲಿ ಶೇ.30% ರಂತೆ 12 ನಿವೇಶನಗಳನ್ನು ಈ ಕಛೇರಿಯಿಂದ ಬಿಡುಗಡೆಗೊಳಿಸಲಾಗಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ ಸಂ	**ಭೂಉಪಯೋಗ**	**ವಿಸ್ತೀರ್ಣ (ಚ.ಮೀ ಗಳಲ್ಲಿ)**	**ಶೇಕಡ (%)**
1	ವಸತಿ	8946.29	54.99
2	ಉದ್ಯಾನವನ	1629.89	10.01
3	ನಾಗರೀಕ ಸೌಲಭ್ಯ	817.26	5.02
4	ರಸ್ತೆಗಾಗಿ	4875.50	29.96
	ಒಟ್ಟು	16268.94	100.00

ನಿವೇಶನಗಳ ವಿವರ			
ಕ್ರ ಸಂ	**ನಿವೇಶನಗಳ ಸಂಖ್ಯೆ**	**ನಿವೇಶನದ ಅಳತೆ (ಮೀಟರ್ ಗಳಲ್ಲಿ)**	**ನಿವೇಶನಗಳ ಸಂಖ್ಯೆ**
1	•	ಅನಿಯತ	17
2	8–9	16.77 X 16.0	02
3	10–12	12.00 X 16.00	03
4	13–14, 21–24 & 31–32	18.0 X 1219	08
5	15–16, 19–20, 25–26 & 29–30	16.77 X 1219	08
6	34–35	12.00 X 16.65	02
		ಒಟ್ಟು	40

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ದಿನಾಂಕ: 26–02–2016 ರಂದು ಅನುಮೋದನೆ ನೀಡಿದ್ದು, ಭೂಮಾಲೀಕರು ದಿನಾಂಕ:11–03–2016 ರಂದು ವಿನ್ಯಾಸ ನಕ್ಷೆಯಲ್ಲಿನ ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ನಿವೇಶನವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಹೆಸರಿಗೆ ಹಸ್ತಾಂತರ ಮಾಡಿರುತ್ತಾರೆ. ಆದರೆ, ಕರ್ನಾಟಕ ರಾಜ್ಯಪತ್ರ ದಿನಾಂಕ: 10–09–2015 ರ ಅಧಿಸೂಚನೆಯನ್ವಯ ನಾಗರೀಕ ಸೌಲಭ್ಯ ನಿವೇಶನವನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾಗಿದೆ.

ಸದರಿ ಅಧಿಸೂಚನೆಯನ್ವಯ ಮೊದಲನೇ ಹಂತದಲ್ಲಿ ಶೇ. 40% ರಷ್ಟು ನಿವೇಶನಗಳು ಬಿಡುಗಡೆಗೊಂಡ ನಂತರ ಉಳಿಕೆ ಶೇ.60% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬೇಕಾಗಿದೆ. ಆದರೆ ಎರಡನೇ ಹಂತದಲ್ಲಿ ಕೇವಲ ಶೇ.30% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿರುವುದು ಕಂಡುಬಂದಿದೆ.

ಮೊದಲನೇ ಹಂತದಲ್ಲಿ 16 ನಿವೇಶನಗಳು, ಎರಡನೇ ಹಂತದಲ್ಲಿ 12 ನಿವೇಶನಗಳು ಒಟ್ಟು 28 ನಿವೇಶನಗಳು ಬಿಡುಗಡೆಗೊಂಡಿದ್ದು, ಉಳಿಕೆ 12 ನಿವೇಶನಗಳನ್ನು ಬಿಡುಗಡೆಗೊಳಿಸಬೇಕಿದೆ. ಎರಡನೇ ಹಂತದಲ್ಲಿ ಬಿಡುಗಡೆಗೊಂಡಿರುವ ನಿವೇಶನಗಳ ಪೈಕಿ 6 ನಿವೇಶನಗಳನ್ನು ಕ್ರಯ ಮಾಡಲಾಗಿದೆ. (ನಿವೇಶನಗಳ ಸಂಖ್ಯೆ: 2,9,13,25,26,27).

ಅರ್ಜಿದಾರರು ದಿನಾಂಕ: 03–01–2023 ರಂದು ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸಿದ್ದು, ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣಪತ್ರ ಪಡೆಯಲು ಶಿಫಾರಸ್ಸು ಪತ್ರ ನೀಡಬೇಕೆಂದು ಕೋರಿದ್ದು, ಅದರಂತೆ ದಿ:11–01–2023 ರಂದು ಈ ಕಛೇರಿಯಿಂದ ಶಿಫಾರಸ್ಸು ಪತ್ರ ನೀಡಲಾಗಿದೆ. ಅರ್ಜಿದಾರರು ಸಂಬಂಧಪಟ್ಟ ಇಲಾಖೆಗಳಾದ ಚೆಸ್ಕಾಂ, ತೋಟಗಾರಿಕೆ ಇಲಾಖೆ, ಪಂಚಾಯರ್‌ರಾಜ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ.

ಸ್ಥಳಪರಿಶೀಲನೆ ವಿವರ: ದಿನಾಂಕ: 07–12–2024 ರಂದು ಸದರಿ ಜಮೀನಿನ ಸ್ಥಳ ಪರಿಶೀಲಿಸಲಾಗಿದೆ ಮತ್ತು ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಲಾಗಿದೆ. ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ.

ಅರ್ಜಿದಾರರು ಸದರಿ ಜಮೀನಿನ ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಇತ್ತೀಚಿನ ಇ.ಸಿ. ಪ್ರತಿ, ಮತ್ತು ಆಧಾರ್‌ಕಾರ್ಡ್ ದಾಖಲಾತಿಗಳನ್ನು ಸಲ್ಲಿಸಿದ್ದು, ಅಂತಿಮ ವಿನ್ಯಾಸ ನಕ್ಷೆಯನ್ನು ಸಲ್ಲಿಸಿರುತ್ತಾರೆ.

ಅಂತಿಮ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	**ಭೂಉಪಯೋಗ**	**ವಿಸ್ತೀರ್ಣ (ಚ.ಮೀ ಗಳಲ್ಲಿ)**	**ಶೇಕಡ (%)**
1	ವಸತಿ	8946.29	54.99
2	ಉದ್ಯಾನವನ	1629.89	10.01
3	ನಾಗರೀಕ ಸೌಲಭ್ಯ	817.26	5.02
4	ರಸ್ತೆಗಾಗಿ	4875.50	29.96
	ಒಟ್ಟು	16268.94	100.00

ನಿವೇಶನಗಳ ವಿವರ			
ಕ್ರ. ಸಂ	**ನಿವೇಶನಗಳ ಸಂಖ್ಯೆ**	**ನಿವೇಶನದ ಅಳತೆ (ಮೀಟರ್ ಗಳಲ್ಲಿ)**	**ನಿವೇಶನಗಳ ಸಂಖ್ಯೆ**
1	•	ಅನಿಯತ	17
2	8–9	16.77 X 16.0	02
3	10–12	12.00 X 16.00	03
4	13–14, 21–24 & 31–32	18.0 X 12.19	08
5	15–16, 19–20, 25–26 & 29–30	16.77 X 12.19	08
6	34–35	12.00 X 16.65	02
		ಒಟ್ಟು	40

ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಈಗಾಗಲೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಹೆಸರಿಗೆ ಹಸ್ತಾಂತರಿಸಿರುವುದರಿಂದ ಅದನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾಗಿರುತ್ತದೆ. ಅದಲ್ಲದೆ, ಕರ್ನಾಟಕ ರಾಜ್ಯಪತ್ರ ದಿನಾಂಕ: 10–09–2015 ರ ಅಧಿಸೂಚನೆಗೆ ವ್ಯತಿರಿಕ್ತವಾಗಿ ಶೇ.40 ರಷ್ಟು ನಿವೇಶನ ಬಿಡುಗಡೆಗೊಂಡ ನಂತರ ಶೇ.60 ರ ಬದಲಾಗಿ ಶೇ.30 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು ದಿನಾಂಕ: 10–09–2015 ರನ್ವಯ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಹೆಸರಿಗೆ ಹಸ್ತಾಂತರಿಸಿಕೊಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರಿಗೆ ತಿಳಿಸಲಾಯಿತು. ಸಿ.ಎ. ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡ ನಂತರ ದಿನಾಂಕ:25–08–2016 ರಂದು ಎರಡನೇ ಹಂತದ ಶೇ.30% ರಷ್ಟು ಬಿಡುಗಡೆಗೊಳಿಸಿದ 12 ನಿವೇಶನಗಳನ್ನು ಒಳಗೊಂಡಂತೆ ಉಳಿಕೆ ಶೇ.30% ರಷ್ಟು ನಿವೇಶನಗಳನ್ನು

ಸೇರಿಸಿ ಒಟ್ಟು ಶೇ. 60% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(05): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಒಟ್ಟು 3.00 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು:– ಶ್ರೀ ಜಗನ್ನಾಥ್ ಮತ್ತು ಶ್ರೀಮತಿ ಸುಂದ್ರಮ್ಮ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ಜಮೀನನ್ನು ಕರಡು ವಸತಿ ವಿನ್ಯಾಸ ನಕ್ಷೆ ಪ್ರಕಾರ ಅಭಿವೃದ್ಧಿಗೊಳಿಸಿದ್ದು, ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಸಲ್ಲಿಸಿರುವುದರಿಂದ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: 583254 ದಿನಾಂಕ: 08–02–2024 ಮತ್ತು ಸಂಖ್ಯೆ: 693649 ದಿನಾಂಕ: 30–08–2024 ರಂದು ವಸತಿ (Residential-Layout) ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸ.ನಂ. 96/24 ರ 2.70 ಎಕರೆ ಜಮೀನು ಪೂರ್ವ ದಿಕ್ಕಿನಲ್ಲಿ ಹಾರಂಗಿ ರಸ್ತೆಯಿಂದ ಸಂಪರ್ಕಹೊಂದಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಪ್ರಶ್ನಿತ ಜಮೀನುಗಳ ಮ್ಯುಟೇಷನ್ ಪ್ರತಿಗಳು, ಇತ್ತೀಚಿನ ಆರ್.ಟಿ.ಸಿ, ಪೌತಿ ಖಾತೆ ಬದಲಾವಣೆ ಪತ್ರ, ಮರಣ ಶಾಸನಪತ್ರ, ಕಾಳಮ್ಮ ಇವರ ಮರಣ ಪ್ರಮಾಣ ಪತ್ರ, ಇ.ಸಿ. ಪ್ರತಿ (ಮರಣ ಪ್ರಮಾಣ ಪತ್ರ ದಿನಾಂಕದಿಂದ ಇಲ್ಲಿಯವರೆಗೆ), ಸರ್ವೆ ನಕ್ಷೆ (ಸ.ನಂ. 96/24 ಮತ್ತು ಸ.ನಂ. 96/23 ರಲ್ಲಿನ ಒಟ್ಟು 3.00 ಎಕರೆ ಜಮೀನುಗಳನ್ನು ಒಟ್ಟುಗೂಡಿಸಿರುವ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ನಕ್ಷೆ), ಪಿ.ಟಿ.ಶೀಟ್, ಟೋಟಲ್ ಸ್ಟೇಷನ್ ನಕ್ಷೆ, ಅಫಿಡೆವಿಟ್, ಆಕಾರ್‌ಬಂದ್ (ಉತಾರು), ಆಧಾರ್‌ಕಾರ್ಡ್ ಮತ್ತು ಸದರಿ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಖಾತೆ ವಿತರಣೆಯಾಗಿಲ್ಲದಿರುವ ಬಗ್ಗೆ ಮುಖ್ಯಾಧಿಕಾರಿ, ಪುರಸಭೆ ಇವರಿಂದ ದೃಢೀಕರಣ ಪತ್ರ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ: ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಮಹಾಯೋಜನೆಯಂತೆ 18.0ಮೀ ಅಗಲದ ರಸ್ತೆಯನ್ನು ಯಥಾವತ್ತಾಗಿ ಅಳವಡಿಸಿ, ಪ್ರಾಧಿಕಾರ ಸಭೆ ದಿನಾಂಕ: 12–09–2024 ರಲ್ಲಿ ವಿಷಯ ಸಂಖ್ಯೆ 05(ಅ)ರ ನಿರ್ಣಯದನ್ವಯ ದಿನಾಂಕ: 23–09–2024 ರಂದು ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ	6656.21	54.82
2	ಉದ್ಯಾನವನ ಮತ್ತು ಆಟದ ಮೈದಾನ	1215.63	10.01
3	ನಾಗರೀಕ ಸೌಲಭ್ಯ	609.11	5.02
4	ರಸ್ತೆಗಾಗಿ	3660.05	30.15
	ಒಟ್ಟು	12141.00	100.00

ನಿವೇಶನಗಳ ವಿವರ		
ಕ್ರ. ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	9.14 X 15.24	03
2	9.14 X 12.20	25
2	9.14 X ಅನಿಯತ	02
3	ಅನಿಯತ ನಿವೇಶನಗಳು (.)	22
	ಒಟ್ಟು	52

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಯ ವಲಯ ನಿಯಮಾವಳಿಗಳನ್ವಯ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಶೇಕಡಾವಾರು ಕನಿಷ್ಟ ಭೂಉಪಯೋಗಗಳು: ಉದ್ಯಾನವನ ಮತ್ತು ಆಟದ ಮೈದಾನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ನಿಗಧಿಪಡಿಸಲಾಗಿದೆ.

ಸ್ಥಳಪರಿಶೀಲನೆ ವಿವರ: ದಿನಾಂಕ: 10–12–2024 ರಂದು ಸದರಿ ಜಮೀನಿನ ಸ್ಥಳ ಪರಿಶೀಲಿಸಲಾಗಿದೆ ಮತ್ತು ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಲಾಗಿದೆ. ಬಡಾವಣೆ ಮಾಲೀಕರು ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ. ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಕುಶಾಲನಗರ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೈಸೂರು, ತೋಟಗಾರಿಕೆ ಇಲಾಖೆ ಸೋಮವಾರಪೇಟೆ ಹಾಗೂ ಪುರಸಭೆ, ಕುಶಾಲನಗರ ಇವರುಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಜಮೀನಿನ ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಇತ್ತೀಚಿನ ಇ.ಸಿ. ಪ್ರತಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ವಿನ್ಯಾಸ ನಕ್ಷೆಯಲ್ಲಿರುವ ರಸ್ತೆ, ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ ಮತ್ತು ನಿವೇಶನಗಳನ್ನು ಬಿಡುಗಡೆಗೊಳಿಸಬಹುದಾಗಿದೆ. ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ವಿನ್ಯಾಸ ನಕ್ಷೆಯಲ್ಲಿನ ರಸ್ತೆ ಮತ್ತು ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(06): ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ಭೂಮಾಲೀಕರ ಕೋರಿಕೆಯಂತೆ ಕುಶಾಲನಗರ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿ ಗುಮ್ಮನಕೊಲ್ಲಿ ಗ್ರಾಮದ ಸರ್ವೆ ನಂ. 95/4 ರಲ್ಲಿ 0.14 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಕಾಯ್ದಿರಿಸಲಾಗಿದ್ದು, ವಸತಿ ಉದ್ದೇಶದಿಂದ ವಾಣಿಜ್ಯ (ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜಿಂಗ್ ಹಾಗೂ ಪಾರ್ಟಿಹಾಲ್) ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ. **(ಅರ್ಜಿದಾರರು ಶ್ರೀಮತಿ ಕೆ.ವಿ. ನೇತ್ರಾವತಿ ಕೋಂ ಪ್ರವೀಣ್ ಕುಮಾರ್)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ಮಹಾಯೋಜನೆಯಲ್ಲಿ ವಸತಿ ಉದ್ದೇಶಕ್ಕೆ ಕಾಯ್ದಿರಿಸಿರುವ ಪ್ರದೇಶವನ್ನು ವಾಣಿಜ್ಯ ಉದ್ದೇಶಕ್ಕೆ ಭೂಮಾಲೀಕರ ಕೋರಿಕೆಯಂತೆ ಭೂಉಪಯೋಗ ಬದಲಾವಣೆ ಮನವಿ ಸಲ್ಲಿಸಿರುವ ವಿವರಗಳು ಈ ಮುಂದಿನಂತಿವೆ.

ಕ್ರ ಸಂ	ಮಾಲೀಕರ ಹೆಸರು	ಗ್ರಾಮ	ಸರ್ವೆ ನಂಬರ್	ಒಟ್ಟು ಕ್ಷೇತ್ರ	ಹಾಲಿ ಇರುವ ಭೂ ಉಪಯೋಗ	ಬದಲಾಯಿಸುವ ಭೂಉಪಯೋಗ	ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಪ್ರಕಟಣೆಗೊಂಡ ಪತ್ರಿಕೆ ಮತ್ತು ದಿನಾಂಕ
1	ಶ್ರೀಮತಿ ಕೆ.ವಿ. ನೇತ್ರಾವತಿ ಕೋಂ ಪ್ರವೀಣ್ ಕುಮಾರ್	ಗುಮ್ಮನಕೊಲ್ಲಿ	95/4	0.14 ಎಕರೆ	ವಸತಿ	ವಾಣಿಜ್ಯ (ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜಿಂಗ್ ಹಾಗೂ ಪಾರ್ಟಿಹಾಲ್)	ಸಂ:ಕುಯೋಪ್ರಾ/ಸಕಾ/ ಭೂಉಪಯೋಗ ಬದಲಾವಣೆ/ಪ್ರಕಟಣೆ–01/2024–25 ದಿನಾಂಕ: 12–11–2024	ಶಕ್ತಿ ದಿನಪತ್ರಿಕೆ ದಿ:12–11–2024 ಮತ್ತು ಪ್ರಜಾಸತ್ಯ ದಿ:12–11–2024

ಅರ್ಜಿದಾರರು ಗುಮ್ಮನಕೊಲ್ಲಿ ಗ್ರಾಮದ ಸರ್ವೆ ನಂ. 95/4 ರಲ್ಲಿ 0.14 ಎಕರೆ ವಿಸ್ತೀರ್ಣದ ವಸತಿ ಉದ್ದೇಶಕ್ಕೆ ಭೂಪರಿವರ್ತನೆಯಾಗಿರುವ ಪ್ರದೇಶವನ್ನು ವಾಣಿಜ್ಯ (ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜಿಂಗ್ ಹಾಗೂ ಪಾರ್ಟಿ ಹಾಲ್) ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಕೋರಿ ದಿನಾಂಕ: 09–10–2024 ರಂದು ಮನವಿ ಸಲ್ಲಿಸಿರುತ್ತಾರೆ.

ಸರ್ಕಾರವು ಕುಶಾಲನಗರ ಯೋಜನಾ ಪ್ರಾಧಿಕಾರದ ಅಂತಿಮ ಮಹಾಯೋಜನೆಗೆ ದಿನಾಂಕ:18–08–2022 ರಂದು ಅನುಮೋದನೆ ನೀಡಿದ್ದು, ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ.

ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:545440 ದಿನಾಂಕ: 30–01–2024 ರಂದು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 14(ಎ) ರಂತೆ ನಿಯಮಾನುಸಾರ ಕ್ರಮವಹಿಸಿ, ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಸಾರ್ವಜನಿಕರಿಂದ ಯಾವುದಾದಾರೂ ಆಕ್ಷೇಪಣೆಗಳು ಇದ್ದಲ್ಲಿ ನೋಂದಣಿ ಅಂಚೆ ಮೂಲಕ ಅಥವಾ ಖುದ್ದಾಗಿ 15 ದಿನಗಳ ಒಳಗಾಗಿ ಸಲ್ಲಿಸುವಂತೆ ಪ್ರಕಟಣೆಯನ್ನು ಹೊರಡಿಸಿದ್ದು, ದಿನಾಂಕ:12–11–2024 ರಂದು ವ್ಯಾಪಕ ಪ್ರಚಾರದಲ್ಲಿರುವ ಸ್ಥಳೀಯ ಎರಡು ದಿನಪತ್ರಿಕೆಗಳಲ್ಲಿ ಪ್ರಕಣೆಯನ್ನು ನಿಯಮಾನುಸಾರ ಪ್ರಕಟಿಸಬೇಕೆಂದು ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ಕೊಡಗು ಜಿಲ್ಲೆ, ಮಡಿಕೇರಿ ಇವರನ್ನು ಕೋರಲಾಗಿದೆ. ಅದರಂತೆ ಸದರಿ ಪ್ರಕಟಣೆಯು ಶಕ್ತಿ ಮತ್ತು ಪ್ರಜಾಸತ್ಯ ಎರಡು ಸ್ಥಳೀಯ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿದೆ.

ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುವುದಿಲ್ಲ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ:– ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ. ಹಾಗೂ ಸದರಿ ಜಮೀನಿನ ಸ್ಥಳ ಪರಿಶೀಲನೆ ಮಾಡಲಾಗಿದೆ. ಜಮೀನಿನ ಪೂರ್ವ ದಿಕ್ಕಿನಲ್ಲಿ ಮಹಾಯೋಜನೆಯ 18.0ಮೀ ಅಗಲದ ಹಾರಂಗಿ ರಸ್ತೆಗೆ ಲಗತ್ತಾಗಿದೆ. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಅಣೆಕಟ್ಟು ಉಪವಿಭಾಗ ಹುಲುಗುಂದ ಇವರು ಪ್ರಸ್ತಾವಿತ ಜಮೀನಿಗೆ 20.12ಮೀ ಅಗಲದ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಒಳಪಟ್ಟಿರುವ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ ಎಂಬುದಾಗಿ ರಸ್ತೆ ಮಾಹಿತಿ ಪತ್ರ ನೀಡಿರುತ್ತಾರೆ.

ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಪತ್ರ ಸಲ್ಲಿಸಿದ್ದು, ಅದರಲ್ಲಿ **"**ಸದರಿ ಜಾಗವು ಕುಶಾಲನಗರದಿಂದ 1.5ಕಿ.ಮೀ ಇದ್ದು ನಗರಕ್ಕೆ ಹೊಂದಿಕೊಂಡಿರುತ್ತದೆ, ಪರುಸಭೆ ವ್ಯಾಪ್ತಿಗೆ ಬರುತ್ತದೆ, ವಾಣಿಜ್ಯ ಉದ್ದೇಶದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಲಾಡ್ಜಿಂಗ್ ಹಾಗೂ ಪಾರ್ಟಿ ಹಾಲ್ ನಿರ್ಮಿಸಲು ಉದ್ದೇಶಿದ್ದು, ಇದರಿಂದ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ದೊರೆತು ಸುತ್ತಮುತ್ತಲಿನ ಜನರಿಗೆ ಜೀವನೋಪಾಯಕ್ಕೆ ಹಲವಾರು ರೀತಿಯ ಕೆಲಸಗಳಿಗೆ ಅವಕಾಶ ದೊರೆತು ಜನರ ಜೀವನ ಮಟ್ಟ ಸುಧಾರಿಸುತ್ತದೆ, ಇಲ್ಲಿಗೆ ಬಂದು ಹೋಗುವ ಪ್ರವಾಸಿಗರನ್ನು ಕರೆತರಲು ಆಟೋ ಮತ್ತು ಟ್ಯಾಕ್ಸಿ ಮಾಲೀಕರಿಗೆ ಇದರಿಂದ ತುಂಬಾ ಉಪಯೋಗವಾಗುತ್ತದೆ, ಈ ಯೋಜನೆಯ ಕಟ್ಟಡದಿಂದ ಪಂಚಾಯಿತಿಗೆ ದೊಡ್ಡ ಮೊತ್ತದ ಕಂದಾಯ ಶೇಖರಣೆಯಾಗುತ್ತದೆ ಎಂದು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಬೆಳವಣಿಗೆಗೆ ತುಂಬಾ ಅನುಕೂಲವಾಗುತ್ತದೆ**"** ಎಂದು ಪತ್ರದಲ್ಲಿ ತಿಳಿಸಿರುತ್ತಾರೆ.

ಜಮೀನು ಅಭಿವೃದ್ಧಿಹೊಂದಿದ ಪ್ರದೇಶದಲ್ಲಿದ್ದು, ವಾಣಿಜ್ಯ ಉಪಯೋಗಕ್ಕೆ ಸೂಕ್ತವಾಗಿದೆ. ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಪರಿಗಣಿಸಬಹುದಾಗಿದೆ. ಆದ್ದರಿಂದ ಕೆ.ಟಿ.ಸಿ.ಪಿ ಕಾಯ್ದೆ ಕಲಂ 14(ಎ) ರಂತೆ ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಿ ಪತ್ರಿಕಾ ಪ್ರಕಟಣೆಯನ್ನು ನೀಡಿದ್ದು, ನಿಗಧಿತ ಸಮಯದಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇರುವುದರಿಂದ, ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ನಿಗಧಿತ ಸಮಯದಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇರುವುದರಿಂದ, ಭೂಮಾಲೀಕರಿಂದ ಪತ್ರಿಕಾ ಪ್ರಕಟಣೆ ವೆಚ್ಚವನ್ನು ಭರಿಸಿಕೊಂಡು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ಪ್ರಕಾರ ನಿಯಮಾನುಸಾರ ಗುಮ್ಮನಕೊಲ್ಲಿ ಗ್ರಾಮದ ಸರ್ವೆ ನಂ. 95/4 ರಲ್ಲಿ 0.14 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶದಿಂದ ವಾಣಿಜ್ಯ (ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜಿಂಗ್ ಹಾಗೂ ಪಾರ್ಟಿಹಾಲ್) ಉದ್ದೇಶಕ್ಕೆ ಭೂಉಪಯೋಗ ಬದಲಾವಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(07): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 192/4 ರಲ್ಲಿ 0.29.50 ಎಕರೆ ಜಮೀನಿನ ವಾಣಿಜ್ಯ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು ತೆರೆಸಾ ಫಾಯಿಸ್**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಪ್ರಶ್ನಿತ ಜಮೀನಿನ ವಾಣಿಜ್ಯ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತಾರೆ.

ಪರಿಶೀಲಿಸಲಾಗಿ, ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತಿಸಲು ಈ ಕಚೇರಿಯಿಂದ ತಾಂತ್ರಿಕ ಅಭಿಪ್ರಾಯವನ್ನು ದಿನಾಂಕ:07–08–2023 ರಂದು ನೀಡಲಾಗಿದೆ.

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 515372 ದಿನಾಂಕ: 01–12–2023 ರಂದು ವಾಣಿಜ್ಯ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ಹಾಗೂ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಜಮೀನು ಪಶ್ಚಿಮ ದಿಕ್ಕಿನಲ್ಲಿ 17.6ಮೀ ಅಗಲದ ರಾಜ್ಯ ಹೆದ್ದಾರಿ–91 ರಿಂದ ಸಂಪರ್ಕ ಹೊಂದಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಇತ್ತೀಚಿನ ಇ.ಸಿ. ಪ್ರತಿ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇತ್ತೀಚಿನ ಆರ್.ಟಿ.ಸಿ, ಪೌತಿ ಖಾತೆ ಬದಲಾವಣೆ ಪತ್ರ, ಸೆಲ್‌ವರ್‌ಸ್ಟರ್ ಪಾಯಿಸ್ ಇವರ ಮರಣ ಪ್ರಮಾಣ ಪತ್ರ, ಮ್ಯುಟೇಷನ್ ಪ್ರತಿ, ಕರಡುನಕ್ಷೆ, ಆಧಾರ್ ಕಾರ್ಡ್, ಕ್ರಯಪತ್ರ, ಅಲಿನೇಷನ್ ನಕ್ಷೆ, ಅಫಿಡೆವಿಟ್, ಆಕಾರ್‌ಬಂದ್(ಉತಾರು) ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳ ಪರಿಶೀಲನೆಯನ್ನು ಮಾಡಲಾಗಿದೆ ಹಾಗೂ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ. ಸದರಿ ಜಮೀನು ಪಶ್ಚಿಮ ದಿಕ್ಕಿನಲ್ಲಿ ರಾಜ್ಯ ಹೆದ್ದಾರಿ–91ರಿಂದ ಸಂಪರ್ಕ ಹೊಂದಿದ್ದು, ರಸ್ತೆ ಮಧ್ಯಭಾಗದಿಂದ 21.0ಮೀ ವಿಸ್ತೀರ್ಣವನ್ನು ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಲಾಗಿದೆ. ಸದರಿ ಜಮೀನು ಹಾಲಿ ಬೆಳವಣಿಗೆಗೆ ಹೊಂದಿಕೊಂಡಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದೆ.

ವಾಣಿಜ್ಯ ಏಕ–ನಿವೇಶನ ನಕ್ಷೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ
ವಾಣಿಜ್ಯ ಉಪಯೋಗಕ್ಕಾಗಿ	1001.56	83.90 %
ವಾಹನ ನಿಲುಗಡೆ	59.73	5.0 %
ಉದ್ಯಾನವನ	119.40	10.0 %
ರಸ್ತೆ ವಿಸ್ತರಣೆಗಾಗಿ	13.02	01.10 %
ಒಟ್ಟು	**1193.71**	**100.00%**

ಖಾತೆ ಮಾಡಬಹುದಾದ ವಿಸ್ತೀರ್ಣ 1180.69 ಚ.ಮೀ ಆಗಿದೆ. ಸದರಿ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಬಹುದಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಸದರಿ ಜಮೀನು ಅಂತಿಮ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದ್ದು, ರಾಜ್ಯ ಹೆದ್ದಾರಿ–91 ರಿಂದ ಸಂಪರ್ಕ ಹೊಂದಿರುವುದರಿಂದ ಮತ್ತು ಹಾಲಿ ಬೆಳವಣಿಗೆಗೆ ಹೊಂದಿಕೊಂಡಿರುವುದರಿಂದ ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ಜಮೀನಿನ ವಾಣಿಜ್ಯ ಉದ್ದೇಶದ ಏಕ–ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(08): ದಿನಾಂಕ:20–07–2024 ರಂದು ನಡೆದ ಪ್ರಾಧಿಕಾರದ 61ನೇ ಸಭೆಯಲ್ಲಿ ಕೂಡ್ಲೂರು ಗ್ರಾಮದ ಸ.ನಂ. 3/16 ರಲ್ಲಿ 3.00 ಎಕರೆ ಮತ್ತು ಸ.ನಂ. 3/17 ರಲ್ಲಿ 2.85 ಎಕರೆ ಒಟ್ಟು 5.85 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲು ನಿರ್ಣಯಿಸಲಾಗಿದ್ದು, ಸದರಿ ವಿಷಯವನ್ನು ಮತ್ತೊಮ್ಮೆ ಸಭೆಗೆ ಮಂಡಿಸಿದೆ. **(ಅರ್ಜಿದಾರರು:– ಶ್ರೀಮತಿ ಸುಬ್ಬಮ್ಮ ಮತ್ತು ಶ್ರೀಮತಿ ಲಲಿತ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದ 61ನೇ ಸಭೆಯಲ್ಲಿ ಕೂಡ್ಲೂರು ಗ್ರಾಮದ ಸ.ನಂ. 3/16 ರಲ್ಲಿ 3.00 ಎಕರೆ ಮತ್ತು ಸ.ನಂ. 3/17 ರಲ್ಲಿ 2.85 ಎಕರೆ ಒಟ್ಟು 5.85 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಸಂಬಂಧ ಸಭೆಯಲ್ಲಿ ಚರ್ಚಿಸಿದ್ದು, ಸದರಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಿರುವ ನಿವೇಶನಗಳನ್ನು ಮತ್ತು ಒತ್ತುವರಿ ಜಮೀನನ್ನು ಹೊರತುಪಡಿಸಿ, ಉಳಿಕೆ ಜಮೀನಿಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಸರ್ವೆ ನಕ್ಷೆಯನ್ನು ಮಾಡಿಸಿ ಸಲ್ಲಿಸಿದಲ್ಲಿ, ಅದರಂತೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ತದನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಸದರಿ 61ನೇ ಸಭೆಯ ನಡವಳಿಯನ್ನು ಸರ್ಕಾರಕ್ಕೆ ಮತ್ತು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿತ್ತು. ಮಾನ್ಯ ನಿರ್ದೇಶಕರು ದಿನಾಂಕ:07–11–2024 ರ ಪತ್ರದಲ್ಲಿ 61ನೇ ಸಭೆಯ ನಡವಳಿಯಲ್ಲಿನ ನ್ಯೂನತೆಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಸಲ್ಲಿಸುವಂತೆ ತಿಳಿಸಿದ್ದು, ಒಟ್ಟು ಭೂಪರಿವರ್ತಿತ ಜಮೀನಿನಲ್ಲಿ ಕಟ್ಟಡ ನಿರ್ಮಿಸಿರುವ ಜಾಗವನ್ನು ಹೊರತುಪಡಿಸಿ ವಿನ್ಯಾಸವನ್ನು ಅನುಮೋದನೆ ಮಾಡಲು ನಿರ್ಣಯಿಸಿದ್ದು ಸರಿಯಾದ ಕ್ರಮವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ನಿರ್ಣಯವನ್ನು ರದ್ದುಪಡಿಸಿ ಒಟ್ಟು ಭೂಪರಿವರ್ತಿತ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಲಾಗುವುದೆಂದು ಮಾನ್ಯ ನಿರ್ದೇಶಕರಿಗೆ ವರದಿಯನ್ನು ನೀಡಲಾಗಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಒಟ್ಟು ಭೂಪರಿವರ್ತಿತ ಜಮೀನಿನಲ್ಲಿ ಒತ್ತುವರಿ ಜಮೀನನ್ನು ಮತ್ತು ಕಟ್ಟಡ ನಿರ್ಮಿಸಿರುವ ನಿವೇಶನಗಳನ್ನು ಹೊರತುಪಡಿಸಿ, ಉಳಿಕೆ ಜಮೀನಿಗೆ ವಿನ್ಯಾಸ ನಕ್ಷೆ ಅನುಮೋದನೆ ನೀಡಬಹುದೆಂದು ನಿರ್ಣಯಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲ ಎಂದು ಮಾನ್ಯ ನಿರ್ದೇಶಕರು ತಿಳಿಸಿರುವುದರಿಂದ ಸದರಿ ನಿರ್ಣಯವನ್ನು ರದ್ದುಪಡಿಸಿ, ಒಟ್ಟು ಭೂಪರಿವರ್ತಿತ ಜಮೀನಿನಲ್ಲಿ ಒತ್ತುವರಿ ಜಾಗವನ್ನು ಗುರುತಿಸಿಕೊಂಡು ಪರಿಷ್ಕೃತ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯಂತೆ ರಸ್ತೆ, ಉದ್ಯಾನವನದ ಜಾಗಗಳನ್ನು ಗ್ರಾಮಪಂಚಾಯಿತಿಗೆ ಮತ್ತು ಸಿ.ಎ ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆಯನ್ನು ನೀಡಬಹುದಾಗಿದೆ. ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಹಿಂದಿನ ಸಭೆಯ ನಿರ್ಣಯವನ್ನು ರದ್ದುಪಡಿಸಿ, ಒಟ್ಟು ಭೂಪರಿವರ್ತಿತ ಜಾಗವನ್ನು ಗುರುತಿಸಿಕೊಂಡು ಪರಿಷ್ಕೃತ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯಂತೆ ರಸ್ತೆ, ಉದ್ಯಾನವನದ ಜಾಗಗಳನ್ನು ಗ್ರಾಮಪಂಚಾಯಿತಿಗೆ ಮತ್ತು ಸಿ.ಎ ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆಯನ್ನು ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(09): ಬೈಚನಹಳ್ಳಿ ಗ್ರಾಮದ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಾಯ್ದಿರಿಸಲು ಮತ್ತು ಕಛೇರಿ ಕಟ್ಟಡ ನಿರ್ಮಾಣಕ್ಕೆ Fund I ರಲ್ಲಿರುವ ಮೊಬಲಗನ್ನು ಹಾಗೂ Fund V ನಲ್ಲಿರುವ ಮೊಬಲಗನ್ನು ಉಪಯೋಗಿಸಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಿದ್ದು ವಿಷಯವನ್ನು ಮತ್ತೊಮ್ಮೆ ಸಭೆಗೆ ಮಂಡಿಸಿದೆ.

ಟಿಪ್ಪಣಿ: ಸದರಿ ವಿಷಯವನ್ನು 61ನೇ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಹಿಂದಿನ ಸಭೆಯ ನಿರ್ಣಯದಲ್ಲಿ ಚಂದ್ರಶೇಖರ ಬಡಾವಣೆಯಲ್ಲಿರುವ ಸಿ.ಎ. ನಿವೇಶನವನ್ನು ಕಛೇರಿ ಕಟ್ಟಡಕ್ಕಾಗಿ ಕಾಯ್ದಿರಿಸಿದ್ದನ್ನು ರದ್ದುಪಡಿಸಿ, ಬೈಚನಹಳ್ಳಿ ಗ್ರಾಮದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಾಯ್ದಿರಿಸಲು ಮತ್ತು ಕಛೇರಿ ಕಟ್ಟಡ ನಿರ್ಮಾಣಕ್ಕೆ Fund I ರಲ್ಲಿರುವ ಮೊಬಲಗನ್ನು ಹಾಗೂ Fund V ನಲ್ಲಿರುವ ಮೊಬಲಗನ್ನು ಉಪಯೋಗಿಸಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಸದರಿ ನಡವಳಿಯನ್ನು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿತ್ತು. ಮಾನ್ಯ ನಿರ್ದೇಶಕರು ದಿನಾಂಕ:07–11–2024 ರ ಪತ್ರದಲ್ಲಿ Fund 5 ರಲ್ಲಿ ಕಛೇರಿ ಕಟ್ಟಡ ನಿರ್ಮಾಣ ಮಾಡಲು ನಿರ್ಣಯಿಸಿದ್ದು ಸರ್ಕಾರದ ನಿಯಮಗಳಿಗೆ ವ್ಯತಿರಿಕ್ತವಾಗಿರುತ್ತದೆ ಎಂದು ತಿಳಿಸಿದ್ದು, ಸ್ಪಷ್ಟೀಕರಣ ಸಲ್ಲಿಸುವಂತೆ ತಿಳಿಸಿರುತ್ತಾರೆ. ಸದರಿ ನಿರ್ಣಯವನ್ನು ಮುಂದಿನ ಸಭೆಯಲ್ಲಿ ರದ್ದುಪಡಿಸಲಾಗುವುದೆಂದು ವರದಿಯನ್ನು ನೀಡಲಾಗಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸದರಿ ನಿರ್ಣಯವನ್ನು ರದ್ದುಪಡಿಸಲಾಗುವುದೆಂದು ಸ್ಪಷ್ಟೀಕರಣವನ್ನು ಮಾನ್ಯ ನಿರ್ದೇಶಕರಿಗೆ ಸಲ್ಲಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: UDD 285 MYAPRA 2016 dated: 03-06-2019 ರನ್ವಯ ಕೇವಲ Fund I ಅನ್ನು ಮಾತ್ರ ಉಪಯೋಗಿಸಬಹುದಾಗಿರುತ್ತದೆ. ಆದ್ದರಿಂದ ಹಿಂದಿನ ಸಭೆಯ ನಿರ್ಣಯವನ್ನು ರದ್ದುಪಡಿಸುವುದ ಸೂಕ್ತವಾಗಿರುತ್ತದೆ. ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: UDD 285 MYAPRA 2016 dated: 03-06-2019 ರನ್ವಯ ಕೇವಲ Fund I ರಲ್ಲಿನ ಮೊಬಲಗನ್ನು ಉಪಯೋಗಿಸಿಕೊಂಡು ಕಛೇರಿ ಕಟ್ಟಡ ನಿರ್ಮಾಣ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(10): ದಿನಾಂಕ:20–07–2024 ರಂದು ನಡೆದ ಪ್ರಾಧಿಕಾರದ 61ನೇ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಸಂಖ್ಯೆ 12(ಖ) ರಲ್ಲಿ ಗುಂಡುರಾವ್ ಬಡಾವಣೆಯ ನಾಗರೀಕ ಸೌಲಭ್ಯ ನಿವೇಶನದಲ್ಲಿ ಸಂಚಾರಿ ಪೋಲೀಸ್ ಠಾಣೆಯ ಕಟ್ಟಡ ನಿರ್ಮಾಣಕ್ಕಾಗಿ ಅಡಿಪಾಯವನ್ನು ನಿರ್ಮಿಸಿದ್ದು, ಅಡಿಪಾಯದ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಲು ನಿರ್ಣಯಿಸಲಾಗಿದ್ದು, ಸದರಿ ವಿಷಯವನ್ನು ಮತ್ತೊಮ್ಮೆ ಸಭೆಗೆ ಮಂಡಿಸಿದೆ.

ಟಿಪ್ಪಣಿ: ಬೈಚನಹಳ್ಳಿ ಗ್ರಾಮದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿರುವ 26.72 ಸೆಂಟ್ಸ್ (1081.713 ಚ.ಮೀ) ವಿಸ್ತೀರ್ಣದ ಸಿ.ಎ. ನಿವೇಶನವನ್ನು ಈ ಹಿಂದೆ ಸಂಚಾರಿ ಪೋಲೀಸ್ ಠಾಣೆ ನಿರ್ಮಾಣಕ್ಕಾಗಿ ಪೋಲೀಸ್ ಇಲಾಖೆಗೆ ಪಟ್ಟಣಪಂಚಾಯಿತಿ

ಕುಶಾಲನಗರ ಇವರ ವತಿಯಿಂದ ಮಂಜೂರಾಗಿತ್ತು. ಆದರಂತೆ ಪೋಲೀಸ್ ಇಲಾಖೆಯವರು ಕಟ್ಟಡ ನಿರ್ಮಿಸಲು ಸದರಿ ಸಿ.ಎ. ನಿವೇಶನದಲ್ಲಿ ಅಡಿಪಾಯವನ್ನು ನಿರ್ಮಿಸಿರುತ್ತಾರೆ. ಆದರೆ ಮಾನ್ಯ ಉಚ್ಚನ್ಯಾಯಾಲಯದ ತೀರ್ಪಿನಂತೆ ಸದರಿ ಮಂಜೂರಾತಿಯನ್ನು ರದ್ದುಪಡಿಸಲಾಗಿದೆ. ನಂತರ ಮುಖ್ಯಾಧಿಕಾರಿ, ಪುರಸಭೆ ಇವರು ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಸದರಿ ಸಿ.ಎ ನಿವೇಶನವನ್ನು ಯೋಜನಾ ಪ್ರಾಧಿಕಾರದ ಹೆಸರಿಗೆ ನೊಂದಾಯಿಸಿ ಖಾತೆ ನೀಡಿರುತ್ತಾರೆ.

ದಿನಾಂಕ:20–07–2024 ರಂದು ನಡೆದ ಪ್ರಾಧಿಕಾರದ 61ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(3) ರಲ್ಲಿ ಸದರಿ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಾಯ್ದಿರಿಸಲು ನಿರ್ಣಯಿಸಲಾಗಿದೆ.

ಸದರಿ ಸಿ.ಎ ನಿವೇಶನದಲ್ಲಿ ಈಗಾಗಲೇ ಪೋಲೀಸ್ ಇಲಾಖೆಯಿಂದ ಅಡಿಪಾಯವನ್ನು ನಿರ್ಮಿಸಿರುವುದರಿಂದ, ಅಡಿಪಾಯದ ನಕ್ಷೆ, ಕಟ್ಟಡ ನಕ್ಷೆ, ಅಂದಾಜುಪಟ್ಟಿ ಹಾಗೂ ಈ ಹಂತದವರೆಗೆ ತಗುಲಿರುವ ವೆಚ್ಚವನ್ನು ಲೋಕೋಪಯೋಗಿ ಇಲಾಖೆ ಇವರಿಂದ ದೃಢೀಕರಿಸಿಕೊಂಡು ಸಲ್ಲಿಸಿದ್ದಲ್ಲಿ, ಸದರಿ ವೆಚ್ಚವನ್ನು ಪ್ರಾಧಿಕಾರದಿಂದ ಪಾವತಿಸಬಹುದಾಗಿದೆ ಎಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿತ್ತು. ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಗುಂಡುರಾವ್ ಬಡಾವಣೆಯು ಐ.ಡಿ.ಎಸ್.ಎಂ.ಟಿ ಯೋಜನೆ ಮೂಲಕ ರಚನೆಯಾಗಿದ್ದು, ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವು ಪಟ್ಟಣಪಂಚಾಯಿತಿ ಹೆಸರಿನಲ್ಲಿದ್ದು, ಯೋಜನೆಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದನ್ವಯ ಪುರಸಭೆ ಯೋಜನಾ ಪ್ರಾಧಿಕಾರದ ಹೆಸರಿಗೆ ಹಸ್ತಾಂತರಿಸುವ ಮೊದಲೇ ಪೋಲೀಸ್ ಇಲಾಖೆಯವರು ಸದರಿ ಸಿ.ಎ. ನಿವೇಶನದಲ್ಲಿ ಅಡಿಪಾಯವನ್ನು ನಿರ್ಮಿಸಿರುತ್ತಾರೆ. ಸದರಿ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಬಹುದೇ ಎಂಬುದರ ಬಗ್ಗೆ ಸರ್ಕಾರದಿಂದ ಮಾರ್ಗದರ್ಶನ ಪಡೆಯುವುದು ಸೂಕ್ತವಾಗಿದ್ದು, ಹಿಂದಿನ ಸಭೆಯ ನಿರ್ಣಯವನ್ನು ರದ್ದುಗೊಳಿಸಬೇಕಾಗಿರುತ್ತದೆ. ವಿಷಯವನ್ನು ಮತ್ತೊಮ್ಮೆ ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಗುಂಡುರಾವ್ ಬಡಾವಣೆಯ ನಾಗರೀಕ ಸೌಲಭ್ಯ ನಿವೇಶನವನ್ನು ಪ್ರಾಧಿಕಾರದ ಕಛೇರಿ ಕಟ್ಟಡ ಕಟ್ಟಲು ಕಾಯ್ದಿರಿಸಿರುವುದರಿಂದ, ಪೋಲೀಸ್ ಇಲಾಖೆಯಿಂದ ಅಡಿಪಾಯವನ್ನು ನಿರ್ಮಿಸಿದ್ದು, ಸದರಿ ಅಡಿಪಾಯದ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(11): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 86/2 ರಲ್ಲಿ 0.36 ಎಕರೆ ವಿಸ್ತೀರ್ಣದ ಜಮೀನಿನ ಸಾರ್ವಜನಿಕ/ಅರೆಸಾರ್ವಜನಿಕ (ಆಸ್ಪತ್ರೆ) ಉದ್ದೇಶದ ಮತ್ತು 0.15 ಎಕರೆ ವಿಸ್ತೀರ್ಣದ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು:– ಡಾ॥ ಎಂ.ಎಂ. ಪೊನ್ನಪ್ಪ)**

ಟಿಪ್ಪಣಿ: ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಮಾದಾಪಟ್ಟಣ ಗ್ರಾಮದ ಸ.ನಂ. 86/2 ರಲ್ಲಿ 0.36 ಎಕರೆ ವಿಸ್ತೀರ್ಣದ ಜಮೀನಿನ ಸಾರ್ವಜನಿಕ/ಅರೆಸಾರ್ವಜನಿಕ (ಆಸ್ಪತ್ರೆ) ಉದ್ದೇಶದ ಮತ್ತು 0.15 ಎಕರೆ ವಿಸ್ತೀರ್ಣದ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಮಾದಾಪಟ್ಟಣ ಗ್ರಾಮದ ಸ.ನಂ. 86/2 ರಲ್ಲಿ 0.15 ಎಕರೆ ವಿಸ್ತೀರ್ಣದ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಲು ಈ ಕಛೇರಿಯಿಂದ ತಾಂತ್ರಿಕ ಅಭಿಪ್ರಾಯ ನೀಡಿದ್ದು, ಸದರಿ ಜಮೀನು ಪಶ್ಚಿಮ ದಿಕ್ಕಿನಲ್ಲಿ 9.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, 12.0ಮೀ ಅಗಲಕ್ಕೆ ವಿಸ್ತರಿಸುವ ನಿಬಂಧನೆಗೆ ಒಳಪಟ್ಟಿದೆ.

ನಂತರ ಮಾದಾಪಟ್ಟಣ ಗ್ರಾಮದ ಸ.ನಂ. 86/2 ರಲ್ಲಿ 0.36 ಎಕರೆ ವಿಸ್ತೀರ್ಣದ ಜಮೀನು ಮಹಾಯೋಜನೆಯಲ್ಲಿ ಸಾರ್ವಜನಿಕ/ಅರೆಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಅರ್ಜಿದಾರರ ಕೋರಿಕೆಯಂತೆ ಸದರಿ ಜಮೀನನ್ನು ಸಾರ್ವಜನಿಕ/ಅರೆಸಾರ್ವಜನಿಕ (ಆಸ್ಪತ್ರೆ) ಉದ್ದೇಶಕ್ಕೆ ಭೂಪರಿವರ್ತಿಸಲು ಈ ಕಚೇರಿಯಿಂದ ತಾಂತ್ರಿಕ ಅಭಿಪ್ರಾಯವನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ದಿನಾಂಕ:25–12–2023 ರಂದು ನೀಡಲಾಗಿದ್ದು, ಸದರಿ ಜಮೀನಿಗೆ ನೇರವಾದ ರಸ್ತೆ ಸಂಪರ್ಕ ಇಲ್ಲದ ಕಾರಣ, ವಸತಿ ವಲಯದಲ್ಲಿರುವ 0.15 ಎಕರೆ ವಿಸ್ತೀರ್ಣದ ಜಮೀನು 9.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಎರಡು ಜಮೀನಿನ ಮಾಲೀಕರು ಒಬ್ಬರೇ ಆಗಿದ್ದು, ಸದರಿ ಜಮೀನುಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುತ್ತೇವೆಂದು ಅರ್ಜಿದಾರರು ಅಫಿಡೆವಿಟ್ ಸಲ್ಲಿಸಿರುವುದರಿಂದ, ಅದರಂತೆ ಸದರಿ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸಿ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸುವ ನಿಬಂಧನೆಗೆ ಒಳಪಡಿಸಿ, 9.0ಮೀ ಅಗಲದ ರಸ್ತೆಯನ್ನು 12.0ಮೀ ಅಗಲಕ್ಕೆ ವಿಸ್ತರಿಸುವ ನಿಬಂಧನೆಗೆ ಒಳಪಡಿಸಿ, ಸದರಿ ಜಮೀನನ್ನು ಸಾರ್ವಜನಿಕ/ಅರೆಸಾರ್ವಜನಿಕ (ಆಸ್ಪತ್ರೆ) ಉದ್ದೇಶಕ್ಕೆ ಭೂಪರಿವರ್ತಿಸಲು ಈ ಕಛೇರಿಯಿಂದ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ.

ಭೂಪರಿವರ್ತನೆ ಆದೇಶದ ವಿವರ: ಮಾದಾಪಟ್ಟಣ ಗ್ರಾಮದ ಸ.ನಂ. 86/2 ರಲ್ಲಿ 0.15 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 533873 ದಿನಾಂಕ: 20–12–2023 ರಂದು ವಸತಿ ಉದ್ದೇಶಕ್ಕೆ ಮತ್ತು 0.36 ಎಕರೆ ಜಮೀನನ್ನು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 542902 ದಿನಾಂಕ: 21–12–2023 ರಂದು Public and Semi Public Uses-Hospital ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಮಹಾಯೋಜನೆಯಲ್ಲಿ ಸ.ನಂ. 86/2 ರಲ್ಲಿ 0.15 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯಕ್ಕೆ ಮತ್ತು 0.36 ಎಕರೆ ಜಮೀನನ್ನು ಸಾರ್ವಜನಿಕ/ಅರೆಸಾರ್ವಜನಿಕ ವಲಯಕ್ಕೆ ಕಾಯ್ದಿರಿಸಲಾಗಿದೆ.

ರಸ್ತೆ ಸಂಪರ್ಕ: ವಸತಿ ವಲಯದಲ್ಲಿರುವ 0.15 ಎಕರೆ ವಿಸ್ತೀರ್ಣದ ಜಮೀನು ಪಶ್ಚಿಮ ದಿಕ್ಕಿನಲ್ಲಿ 9.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಎರಡು ಜಮೀನಿನ ಮಾಲೀಕರು ಒಬ್ಬರೇ ಆಗಿದ್ದು, ಸದರಿ ಜಮೀನುಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುತ್ತೇವೆಂದು ಅರ್ಜಿದಾರರು ಅಫಿಡೆವಿಟ್ ಸಲ್ಲಿಸಿರುವುದರಿಂದ, ವಸತಿ ವಲಯದ ಜಮೀನಿನ ಮೂಲಕ 0.36 ಎಕರೆ ಸಾರ್ವಜನಿಕ/ಅರೆಸಾರ್ವಜನಿಕ ವಲಯದ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ ಅಂತಿಮ ಮಹಾಯೋಜನೆಯಂತೆ 9.0ಮೀ ಅಗಲದ ರಸ್ತೆಯನ್ನು 12.0ಮೀ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಭೂಪರಿವರ್ತನೆ ಆದೇಶದ ಪ್ರತಿ, ಕ್ರಯಪತ್ರ, ಸ.ನಂ. 86/1 ರಲ್ಲಿನ 0.12.50 ಎಕರೆ ವಿಸ್ತೀರ್ಣದ ಜಾಗವನ್ನು ಗುಡ್ಡೆಹೊಸೂರು ಗ್ರಾಮಪಂಚಾಯಿತಿಗೆ ಹಸ್ತಾಂತರಿಸಿರುವ ಸ್ಥಿರಾಸ್ತಿಯ ದಾನಪತ್ರ, 11ಇ ನಕ್ಷೆ, ಮ್ಯುಟೇಷನ್ ಪ್ರತಿ, ಆಧಾರ್‌ಕಾರ್ಡ್, ಆಕಾರ್ ಬಂದ್(ಉತಾರು), ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಅಲಿನೇಷನ್ ನಕ್ಷೆ, ಆರ್.ಟಿ.ಸಿ, ಇತ್ತೀಚಿನ ಇ.ಸಿ. ಪ್ರತಿ, ಅಲಿನೇಷನ್ ನಕ್ಷೆ, ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳ ಪರಿಶೀಲನೆಯನ್ನು ಮಾಡಲಾಗಿದೆ ಹಾಗೂ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರು ಸ.ನಂ. 86/1 ರಲ್ಲಿನ 0.12.50 ಎಕರೆ ವಿಸ್ತೀರ್ಣದ ಜಾಗವನ್ನು ಗುಡ್ಡೆಹೊಸೂರು ಗ್ರಾಮಪಂಚಾಯಿತಿಗೆ 30 ಅಡಿ ಅಗಲದ ರಸ್ತೆಯನ್ನು ಈಗಾಗಲೇ ಹಸ್ತಾಂತರಿಸಿದ್ದು, 12.0ಮೀ ಅಗಲಕ್ಕೆ ವಿಸ್ತರಿಸಿ

ಹಸ್ತಾಂತರಿಸಬೇಕಾಗಿರುತ್ತದೆ. ಸದರಿ ಜಮೀನಿನಿಂದ ಪ್ರಶ್ನಿತ ಸ.ನಂ. 86/2 ರ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದೆ.

ಸಾರ್ವಜನಿಕ/ಅರೆಸಾರ್ವಜನಿಕ ಆಸ್ಪತ್ರೆ ಉದ್ದೇಶದ ಹಾಗೂ ವಸತಿ ಉದ್ದೇಶದ ಏಕ–ನಿವೇಶನ ನಕ್ಷೆಯ ವಿವರ ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ
ಸಾರ್ವಜನಿಕ/ಅರೆಸಾರ್ವಜನಿಕ ಆಸ್ಪತ್ರೆ ಉದ್ದೇಶಕ್ಕಾಗಿ	1456.87	55.59 %
ವಾಹನ ನಿಲುಗಡೆಗಾಗಿ	72.8435	5.00 %
ಉದ್ಯಾನವನಕ್ಕಾಗಿ	145.687	10.00 %
Residential/Personal Housing ಉದ್ದೇಶಕ್ಕಾಗಿ	350.44	16.98%
ರಸ್ತೆಗಾಗಿ	204.08	9.89%
ರಸ್ತೆ ವಿಸ್ತರಣೆಗಾಗಿ	52.51	2.54 %
ಒಟ್ಟು	**2063.90**	**100.00%**

ಸಾರ್ವಜನಿಕ/ಅರೆಸಾರ್ವಜನಿಕ ಆಸ್ಪತ್ರೆ ಉದ್ದೇಶದ ಹಾಗೂ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಬಹುದಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಸದರಿ ಜಮೀನು ಮಹಾಯೋಜನೆಯಲ್ಲಿ ವಸತಿ ವಲಯ ಮತ್ತು ಸಾರ್ವಜನಿಕ/ಅರೆಸಾರ್ವಜನಿಕ ವಲಯದಲ್ಲಿರುವುದಂರಿಂದ ಹಾಗೂ ರಸ್ತೆಗಾಗಿ 30 ಅಡಿ ಜಾಗವನ್ನು ಈಗಾಗಲೇ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವದರಿಂದ, ರಸ್ತೆಯನ್ನು 12.0ಮೀ ಅಗಲಕ್ಕೆ ವಿಸ್ತರಿಸಲು ಜಾಗವನ್ನು ಕಾಯ್ದಿರಿಸಿ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸಾರ್ವಜನಿಕ/ಅರೆಸಾರ್ವಜನಿಕ ಆಸ್ಪತ್ರೆ ಉದ್ದೇಶದ ಹಾಗೂ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(12): ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಪಟ್ಟಣ ಪಂಚಾಯಿತಿಯಿಂದ ಒಬ್ಬ ಚುನಾಯಿತ ಸದಸ್ಯರನ್ನು ನೇಮಿಸಿರುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಪತ್ರ ಸಂ: ನಅಇ 149 ಮೈಅಪ್ರಾ 2008 ಬೆಂಗಳೂರು ದಿನಾಂಕ: 24–02–2009 ರಲ್ಲಿ ಕುಶಾಲನಗರ ಯೋಜನಾ ಪ್ರದೇಶಕ್ಕೆ ಅಧ್ಯಕ್ಷರು ಹಾಗೂ ಸದಸ್ಯರು ಒಳಗೊಂಡಂತೆ ಯೋಜನಾ ಪ್ರಾಧಿಕಾರವನ್ನು ರಚಿಸಿ ಆದೇಶಿಸಿದ್ದು, ಸದರಿ ಆದೇಶದಲ್ಲಿ ಸ್ಥಳೀಯ ಸಂಸ್ಥೆ ಪ್ರತಿನಿಧಿಗಳು: ಕುಶಾಲನಗರ ಪುರಸಭೆಯ ಚುನಾಯಿತ ಸದಸ್ಯರೊಬ್ಬರನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಶ್ರೀ ಬಿ. ಅಮೃತರಾಜ್ ಇವರನ್ನು ಪಟ್ಟಣ ಪಂಚಾಯಿತಿ ಕೌನ್ಸಿಲ್ ತೀರ್ಮಾನದಂತೆ ಯೋಜನಾ ಪ್ರಾಧಿಕಾರಕ್ಕೆ ನೇಮಕ ಮಾಡಲಾಗಿತ್ತು. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಇವರು ದಿನಾಂಕ: 07–12–2024 ರ ಪತ್ರದಲ್ಲಿ ಶ್ರೀ

ಬಿ. ಅಮೃತರಾಜ್ ಇವರ ಬದಲಿಗೆ ಪ್ರಸ್ತುತ ಪುರಸಭೆಯ ಸದಸ್ಯರಾದ ಶ್ರೀ ಆನಂದಕುಮಾರ್ ವಿ.ಎಸ್ ಇವರನ್ನು ನೇಮಿಸುವಂತೆ ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಿರುವ ಮೇರೆಗೆ ಶ್ರೀ ಆನಂದಕುಮಾರ್ ವಿ.ಎಸ್ ಇವರನ್ನು ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ನೇಮಕ ಮಾಡಿರುವುದಾಗಿ ಪತ್ರ ಬರೆದು ಕೌನ್ಸಿಲ್ ಸಭೆಯ ನಿರ್ಣಯದ ಪ್ರತಿಯನ್ನು ಸಲ್ಲಿಸಿರುತ್ತಾರೆ. ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಅಧಿಸೂಚನೆ ಪತ್ರ ಸಂ: ನಅಇ 149 ಮೈಅಪ್ರಾ 2008 ಬೆಂಗಳೂರು ದಿನಾಂಕ: 24–02–2009 ರಲ್ಲಿ ಸ್ಥಳೀಯ ಸಂಸ್ಥೆ ಚುನಾಯಿತ ಸದಸ್ಯರೊಬ್ಬರನ್ನು ಪ್ರತಿನಿಧಿಯಾಗಿ ಯೋಜನಾ ಪ್ರಾಧಿಕಾರಕ್ಕೆ ನೇಮಿಸಲು ಅವಕಾಶ ಕಲ್ಪಿಸಿದ್ದು, ಈ ಬಗ್ಗೆ ಸ್ಥಳೀಯ ಸಂಸ್ಥೆಯ ಕೌನ್ಸಿಲ್ ಸಭೆಯ ನಿರ್ಣಯದಂತೆ ಶ್ರೀ ಆನಂದಕುಮಾರ್ ವಿ.ಎಸ್ ಇವರನ್ನು ನೇಮಿಸಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಿ, ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಬಹುದಾಗಿದ್ದು ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಕುಶಾಲನಗರ ಪುರಸಭೆಯಿಂದ ಯೋಜನಾ ಪ್ರಾಧಿಕಾರಕ್ಕೆ ಕೌನ್ಸಿಲ್ ಸಭೆಯ ನಿರ್ಣಯದಂತೆ ಶ್ರೀ ಆನಂದಕುಮಾರ್ ವಿ.ಎಸ್ ಇವರನ್ನು ನೇಮಿಸಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸಭೆಯಲ್ಲಿ ನಿರ್ಣಯಿಸಿತು.

ವಿಷಯಸಂಖ್ಯೆ(13): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:–

(ಅ): ನಾಗರೀಕ ಸೌಲಭ್ಯ ನಿವೇಶನದ ಖಾತೆಯಲ್ಲಿರುವ ಮೊಬಲಗಿನಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು ಮಾತನಾಡಿ ಚಿಕ್ಕಣ್ಣ ಬಡಾವಣೆಯಲ್ಲಿರುವ ಸಿ.ಎ. ನಿವೇಶನವನ್ನು ಪೊಲೀಸ್ ಇಲಾಖೆಗೆ ಹಂಚಿಕೆ ಮಾಡಿದ್ದು, ಈ ಸಂಬಂಧ ಪೊಲೀಸ್ ಇಲಾಖೆಯವರು ರೂ.24,65,336=00 ಗಳ ಮೊತ್ತವನ್ನು ಗುತ್ತಿಗೆ ಮೊಬಲಗಾಗಿ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಸಿ.ಎ. ನಿವೇಶನ ಹಂಚಿಕೆಯಿಂದ ಬರುವ ಮೊಬಲಗನ್ನು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಬಳಸಬಹುದೆಂದು ಪ್ರಸ್ತಾಪಿಸಿದರು. ಮುಖ್ಯಾಧಿಕಾರಿಗಳು ಮಾತನಾಡಿ ಯೋಜನಾ ಪ್ರಾಧಿಕಾರದ ಮಾಲೀಕತ್ವದಲ್ಲಿರುವ ಸಿ.ಎ ನಿವೇಶನಗಳ ಪೈಕಿ ಒಂದು ನಿವೇಶನವನ್ನು ಆಯ್ಕೆ ಮಾಡಿ ಅದರಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡ ಸಮುಚ್ಚಯ ಮಾಡಬಹುದೆಂದು ತಿಳಿಸಿದರು.

ನಿರ್ಣಯ: ಸದರಿ ವಿಷಯದ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ